
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

26 ಮಾರ್ಚ್ 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 16 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಟನ್‌ನ ಕ್ಯಾಂಟರ್ ಬರಿಯಲ್ಲಿರುವ ಚರ್ಚ್ ಆಫ್ ಇಂಗ್ಲೆಂಡ್‌ನ ಮೊದಲ ಮಹಿಳಾ ಆರ್ಚ್ ಬಿಷಪ್ ಆಗಿ ಸಾರಾ ಮುಲ್ಲಾಲ್ಲಿ (63) ಅವರು ಬುಧವಾರದಿಂದ ಸೇವೆ ಆರಂಭಿಸಿದರು.



ಉದ್ಯಾನ ನಗರಿಯ ಉಸಿರುಗಟ್ಟಿಸಿರುವ ಕಸದ ರಾಶಿ » 2


ಹೆಚ್ಚುಚ್ಚು ಗಿಡ ಬೆಳೆಸುವುದರಿಂದ' ಪರಿಸರ ರಕ್ಷಣೆ » 3


ಆತ್ಮಸ್ಥೈರ್ಯದಿಂದ ಸಮಸ್ಯೆ ಎದುರಿಸುವ ಜಾಣ್ಮೆ ಕರಗತ » 4


# ಆರ್ಥಿಕ ಶಿಸ್ತು-ಜನಪರ ಕಾಳಜಿಯ ಬಜೆಟ್: ಸಿಎಂ

## ಅಭಿವೃದ್ಧಿಗೆ ಸಾಲ ಅನಿವಾರ್ಯ | ಜಿಎಸ್‌ಟಿ ಹಣ ನೀಡದೆ ಕೇಂದ್ರದಿಂದ ಅನ್ಯಾಯ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ಈ ವರ್ಷದ ಬಜೆಟ್ ಗಾತ್ರ 4,48,004 ಕೋಟಿ ರೂ. ಆಗಲಿದ್ದು ಕಳೆದ ವರ್ಷಕ್ಕೆ ಹೋಲಿಸಿದರೆ 38,455 ಕೋಟಿ ರೂ. ಹೆಚ್ಚಾಗಿ ಶೇ.9.4ರಷ್ಟು ಬೆಳವಣಿಗೆಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ವಿಧಾನಸಭೆ ಅಧಿವೇಶನದಲ್ಲಿ ಬುಧವಾರ ಮಾತನಾಡಿದ ಅವರು, 2025-26ರಲ್ಲಿ ನಮ್ಮ ಬಜೆಟ್ ಗಾತ್ರ 4,09,549 ರೂ. ಇತ್ತು. ಕೇಂದ್ರ ಸರ್ಕಾರದ ಬಜೆಟ್ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.5.6 ರಷ್ಟು ಮಾತ್ರ ಬೆಳವಣಿಗೆ ಸಾಧಿಸಿದೆ ಎಂದರು.

2025-26ರಲ್ಲಿ ದೇಶದ ಜಿಡಿಪಿಯು ಸ್ಥಿರ ಬೆಲೆಗಳಲ್ಲಿ ಶೇ.7.4 ಹಾಗು ರಾಜ್ಯದ ಶೇ.8.1 ರಷ್ಟು ಬೆಳವಣಿಗೆ ದಾಖಲಿಸಿದೆ. ಕರ್ನಾಟಕದ ಜಿಎಸ್‌ಡಿಪಿ ದೇಶದ ಜಿಡಿಪಿ ಬೆಳ ವಣಿಗೆಗಿಂತ ಹೆಚ್ಚಿರುವುದು ನಮ್ಮ ಸರ್ಕಾರ ಬಂಡವಾಳ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಆರ್ಥಿಕ ಪ್ರಗತಿಗೆ ಉತ್ತೇಜನ ನೀಡುತ್ತಿರುವುದಕ್ಕೆ ಸಾಕ್ಷಿ. ಈ ಮೂಲಕ ರಾಜ್ಯದ ಆರ್ಥಿಕತೆಯನ್ನು ದೇಶದಲ್ಲಿಯೇ ನಂ.1 ಮಾಡುವತ್ತ ಹೆಜ್ಜೆ ಇಟ್ಟಿದ್ದೇವೆಂದರು.



> **ಹೈಕಮಾಂಡ್ ಅವಕಾಶ ಕೊಟ್ಟರೆ ಮತ್ತೆರಡು ಬಜೆಟ್ ಮಂಡನೆ ಮಾಡುತ್ತೇನೆ. ಅವರು ಮುಂದುವರೆಯಿರಿ ಎಂದರೆ ಮುಂದುವರೆಯುತ್ತೇನೆ. ಎಲ್ಲವೂ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಯಾರೊ ಏನೋ ಹೇಳುತ್ತಾರೆ ಎಂಬುದು ನನಗೆ ಮುಖ್ಯವಲ್ಲ. ಹೈಕಮಾಂಡ್ ತೀರ್ಮಾನವಷ್ಟೇ ಮುಖ್ಯ. ಹೈಕಮಾಂಡ್ ಮೇಲೆ ನನಗೆ ಸಂಪೂರ್ಣ ವಿಶ್ವಾಸ ಇದೆ.**
> -ಸಿದ್ದರಾಮಯ್ಯ, ಮುಖ್ಯಮಂತ್ರಿ

### ರಾಜಕೀಯಕ್ಕಾಗಿ ವಿರೋಧ ಸರಿಯಲ್ಲ

ಸಾಮಾಜಿಕ ಭದ್ರತಾ ಯೋಜನೆಗಳಿಗೆ 10,600 ಕೋಟಿ ರೂ. ಮೀಸಲಿಟ್ಟಿದ್ದೇವೆ. ಸಮಾಜದ ಎಲ್ಲಾ ಅಶಕ್ತರಿಗೆ ಶಕ್ತಿ ತುಂಬಲಾಗುತ್ತಿದೆ. ಬುದ್ಧನ ಕರುಣೆ, ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯವನ್ನು ನಮ್ಮ ಬಜೆಟ್ ಆಧರಿಸಿದೆ. ಆದ್ದರಿಂದ ಈ ಬಾರಿಯ ಬಜೆಟ್ ಅಭಿವೃದ್ಧಿಪರ ಹಾಗು ಜನಪರ ಬಜೆಟ್ ಆಗಿದೆ. ವಿರೋಧ ಪಕ್ಷದವರು ಕೇವಲ ರಾಜಕೀಯಕ್ಕಾಗಿ ವಿರೋಧ ಮಾಡಬಾರದು ಎಂದರು. ದಕ್ಷಿಣ ಭಾರತದ ಇತರ ಪ್ರಗತಿಶೀಲ ರಾಜ್ಯಗಳಿಗೆ ಹೋಲಿಕೆ ಮಾಡಿದರೂ ಸಹ ನಮ್ಮ ವಿತ್ತೀಯ ಕೊರತೆಯ ಪ್ರಮಾಣ ನಿಗದಿತ ಮಟ್ಟದ ಒಳಗೇ ಇದೆ. 2025-26ರ ಪರಿಷ್ಕೃತ ಅಂದಾಜಿನಲ್ಲೂ ರಾಜ್ಯದ ವಿತ್ತೀಯ ಕೊರತೆ ಶೇ.2.95 ರಷ್ಟು ಇರಲಿದೆ. ಮಹಾರಾಷ್ಟ್ರದಲ್ಲಿ ಶೇ.3.0, ಆಂಧ್ರಪ್ರದೇಶ ಶೇ.4.5, ಕೇರಳ ಶೇ.3.8, ತಮಿಳುನಾಡು ಶೇ.3.5 ರಷ್ಟಿದೆ. ಎಲ್ಲಾ ರಾಜ್ಯಗಳಲ್ಲಿ ವಿತ್ತೀಯ ಕೊರತೆಯಿದೆ. ನಮ್ಮ ರಾಜ್ಯದ ವಿತ್ತೀಯ ಕೊರತೆ 0.7 ಇದೆ. ಕೇಂದ್ರ ಸರ್ಕಾರದ ವಿತ್ತೀಯ ಕೊರತೆ 1.5 ರಷ್ಟಿದೆ ಎಂದರು.

**ಅಭಿವೃದ್ಧಿಗಾಗಿ ಸಾಲ ಅಗತ್ಯ**

ನಮ್ಮ ಸರ್ಕಾರ 1.32 ಲಕ್ಷ ಕೋಟಿ ರೂ. ಸಾಲ ಮಾಡಿದ್ದು, ಬಜೆಟ್ ಗಾತ್ರ 4,48,0004 ಕೋಟಿ ರೂ. ಇದ್ದಾಗ ಸಾಲದ ಬಜೆಟ್ ಹೇಗೆ ಆಗಲು ಸಾಧ್ಯ. ಸಾಲದ ಮೇಲೆ ಸರ್ಕಾರ ನಡೆಯುತ್ತಿದೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ಯಾವುದೇ ರಾಜ್ಯ ಅಥವಾ ದೇಶ ಸಾಲ ಮಾಡದಿರಲು ಸಾಧ್ಯವಿಲ್ಲ, ಸಮಾಜ ಕಲ್ಯಾಣ ಹಾಗು ಅಭಿವೃದ್ಧಿಗಾಗಿ ಸಾಲ ಮಾಡಲೇಬೇಕು. ಸರ್ಕಾರ ಸಾಲವನ್ನು ನಿಯಮದ ಮಿತಿಯೊಳಗೆ ಮಾಡಲಾಗಿದೆ. ರಾಜ್ಯದ ಸಾಲದ ಮೊತ್ತ 8,24,000 ಕೋಟಿ ರೂ. ಗಳಷ್ಟಿದೆ ಎಂದು ಹೇಳಿದರು.

2008 ರಿಂದ 2013ರ ವರೆಗೆ ಅಧಿಕಾರದಲ್ಲಿದ್ದ ಬಿಜೆಪಿಯೂ ಸಾಲ ಮಾಡಿದೆ. ಐದು ವರ್ಷಕ್ಕೊಮ್ಮೆ ಸಾಲ ದುಪ್ಪಟ್ಟು ಆಗುತ್ತದೆ. ಮೋದಿ ಪ್ರಧಾನಿಯಾದ ನಂತರ 165 ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ. ಜಿಡಿಪಿ ಬೆಳವಣಿಗೆಯಲ್ಲಿ ರಾಜ್ಯಕ್ಕಿಂತ ದೇಶದ ಸಾಧನೆ ಕಡಿಮೆಯಿದೆ. ದಕ್ಷಿಣ ಭಾರತದ ರಾಜ್ಯಗಳು, ದೇಶದ ಜಿಡಿಪಿಗೆ ಹೆಚ್ಚಿನ ಕೊಡುಗೆ ನೀಡುತ್ತಿದ್ದು, ಅದರಲ್ಲಿ ಕರ್ನಾಟಕ » ನಾಲ್ಕನೇ ಪುಟದಲ್ಲಿ

## ಹಾನುಬಾಳು ಗ್ರಾ.ಪಂ.ಗೆ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಹಾನುಬಾಳು ಗ್ರಾಮ ಪಂಚಾಯಿತಿಯು ಅಭಿವೃದ್ಧಿ ಪಥದಲ್ಲಿ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದೆ.

ರಾಜ್ಯ ಸರ್ಕಾರ ನೀಡುವ ಪ್ರತಿಷ್ಠಿತ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಈ ಬಾರಿಯೂ ಹಾನುಬಾಳು ಪಂಚಾಯಿತಿ ಆಯ್ಕೆಯಾಗಿದ್ದು, ಪಂಚಾಯಿತಿಯ ಇತಿಹಾಸದಲ್ಲಿ ಏಳನೇ ಬಾರಿ ಲಭಿಸುತ್ತಿರುವ ಗಾಂಧಿ ಗ್ರಾಮ ಪ್ರಶಸ್ತಿ ಇದಾಗಿದೆ. ಗ್ರಾಮೀಣ ಭಾಗದಲ್ಲಿ ಮಹಾತ್ಮ ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಉತ್ತಮ ಆಡಳಿತ, ಸ್ವಚ್ಛತೆ, ಕುಡಿಯುವ ನೀರು, ರಸ್ತೆ ಸಂಪರ್ಕ ಹಾಗು ತೆರಿಗೆ ವಸೂಲಾತಿಯಲ್ಲಿ ಅತ್ಯುತ್ತಮ ಸಾಧನೆ ತೋರುವ ಪಂಚಾಯಿತಿಗಳಿಗೆ ಸರ್ಕಾರ ಪ್ರಶಸ್ತಿ ನೀಡಿ ಗೌರವಿಸುತ್ತದೆ. ಹಾನುಬಾಳು ಪಂಚಾಯಿತಿಯು ಈ ಎಲ್ಲಾ ಮಾನದಂಡಗಳಲ್ಲಿ ಮುಂಚೂಣಿ ಕಾಯ್ದುಕೊಳ್ಳುವ ಮೂಲಕ ರಾಜ್ಯದ ಗಮನ ಸೆಳೆದಿದೆ.

**5 ಲ.ರೂ. ನಗದು-ಅಭಿನಂದನಾ ಪತ್ರ**

ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ನೀಡುವ ಪ್ರಶಸ್ತಿಯು 5 ಲ.ರೂ. ಪ್ರೋತ್ಸಾಹ ಧನ, ಅಭಿನಂದನಾ ಪತ್ರ ಒಳಗೊಂಡಿದೆ. ಈ ಅನುದಾನ ವನ್ನು ಗ್ರಾಮದ ಮತ್ತಷ್ಟು ಅಭಿವೃದ್ಧಿ, ವಿಶೇಷವಾಗಿ ಕುಡಿಯುವ ನೀರು ಮತ್ತು ನೈರ್ಮಲ್ಯ ದಂತಹ ಯೋಜನೆಗಳಿಗೆ ಬಳಸಲು ಅವಕಾಶವಿರುತ್ತದೆ. ಕುಡಿಯುವ ನೀರಿನ ಸಮರ್ಪಕ ಪೂರೈಕೆ, ರಸ್ತೆ ಸಂಪರ್ಕ ಮತ್ತು ಬೀದಿ ದೀಪಗಳ ನಿರ್ವಹಣೆ, ಸರ್ಕಾರಿ ಯೋಜನೆಗಳ ಅನುಷ್ಠಾನ, ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಮಾನವ ದಿನಗಳ ಸೃಜನೆ ಮತ್ತು ವಸತಿ ಯೋಜನೆಗಳ ಪಾರದರ್ಶಕ ಜಾರಿ, ನಿಗದಿತ ಸಮಯಕ್ಕೆ ಗ್ರಾಮ ಸಭೆ ನಡೆಸುವುದು ಮತ್ತು ಸಾರ್ವಜನಿಕರ ದೂರುಗಳಿಗೆ ತಕ್ಷಣ ಸ್ಪಂದಿಸುವ ಮೂಲಕ ಪಂಚಾಯಿತಿಯು ಪ್ರಶಸ್ತಿಗೆ ಭಾಜನವಾಗಿದೆ.



> **ಈ ಯಶಸ್ಸು ಕೇವಲ ಒಬ್ಬ ವ್ಯಕ್ತಿಯದ್ದಲ್ಲ. ಸಮೂಹ ಶ್ರಮದ ಫಲ. ಮೇಲಾಧಿಕಾರಿಗಳು, ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು ಹಾಗು ಕಚೇರಿಯ ಪ್ರತಿಯೊಬ್ಬ ಸಿಬ್ಬಂದಿ ಶ್ರಮದಿಂದ ಪ್ರಶಸ್ತಿಗೆ ಆಯ್ಕೆಯಾಗಿದೆ. ಪಂಚಾಯಿತಿಯ ಅಭಿವೃದ್ಧಿ ಕೆಲಸಗಳಲ್ಲಿ ಗ್ರಾಮಸ್ಥರ ಸಹಕಾರ ಹೆಚ್ಚಿದೆ.**
> **- ಹರೀಶ್, ಪಿಡಿಒ**

» ನಾಲ್ಕನೇ ಪುಟದಲ್ಲಿ

## ಲೇಖಕಿ ರೂಪ ಹಾಸನಗೆ ಸಾಹಿತ್ಯಶ್ರೀ ಪ್ರಶಸ್ತಿ

### ಹಂಪನಹಳ್ಳಿ ತಿಮ್ಮೇಗೌಡ, ಚಂದ್ರು ಕಾಳೇನಹಳ್ಳಿ, ಭಾರತೀದೇವಿ ಕೃತಿಗಳಿಗೆ ಬಹುಮಾನ

• ಪ್ರಜೋದಯ ವರದಿ






**ಹಾಸನ:** ಕರ್ನಾಟಕ ಸಾಹಿತ್ಯ ಅಕಾಡೆಮಿ ನೀಡುವ ಸಾಹಿತ್ಯಶ್ರೀ ಪ್ರಶಸ್ತಿಗೆ ಲೇಖಕಿ ರೂಪ ಹಾಸನ ಅವರು ಭಾಜನರಾಗಿದ್ದಾರೆ.

ಅದೇ ರೀತಿ ಡಾ.ಚಂದ್ರು ಕಾಳೇನಹಳ್ಳಿ ಅವರ ಗಂಧವತಿ (ನಾಟಕ), ಡಾ.ಹಂಪನಹಳ್ಳಿ ತಿಮ್ಮೇಗೌಡ ಅವರ ದಾಸೊಕ್ಕಲಿಗರು (ಗ್ರಂಥ ಸಂಪಾದನೆ/ ಸಂಶೋಧನೆ), ಪಿ.ಭಾರತೀದೇವಿ ಅವರ ಚಲಿಸುತ್ತಿವೆ ಚುಕ್ಕಿಗಳು (ಕಾವ್ಯ) ಕೃತಿಗಳು ಬಹುಮಾನಕ್ಕೆ ಆಯ್ಕೆಯಾಗಿವೆ.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಸೇವೆಯನ್ನು ಗುರುತಿಸಿ ಅಕಾಡೆಮಿ 2025ನೇ ಸಾಲಿನ ಸಾಹಿತ್ಯಶ್ರೀ ಪ್ರಶಸ್ತಿಗೆ ನಾಡಿನ 10 ಮಂದಿ ಸಾಹಿತಿಗಳನ್ನು ಪರಿಗಣಿಸಿದೆ. ಬುಧವಾರ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಅವರ ಅಧ್ಯಕ್ಷತೆ ಯಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಹಾಸನ ಜಿಲ್ಲೆಯಿಂದ ರೂಪ ಹಾಸನ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯೂ 25 ಸಾವಿರ ರೂ. ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ.

ಕವಯತ್ರಿ, ಲೇಖಕಿ ಮತ್ತು ಸಾಮಾಜಿಕ ಹೋರಾ ಟಗಾರ್ತಿಯಾಗಿ ಗುರುತಿಸಿಕೊಂಡಿ ರುವ ರೂಪ ಹಾಸನ ಅವರು, ಮಹಿಳೆ, ಮಕ್ಕಳು, ಪರಿಸರ, ಶಿಕ್ಷಣ ವಿಷಯಗಳ ಕುರಿತು ಹಲವು ಕೃತಿ ಗಳನ್ನು ರಚಿಸಿ ಪ್ರಸಿದ್ಧಿ ಪಡೆದಿದ್ದಾರೆ.

**ಬಹುಮಾನ ಪಡೆದ ಕೃತಿಗಳು**

2024ರಲ್ಲಿ ಪ್ರಕಟವಾದ ವಿವಿಧ 17 ಸಾಹಿತ್ಯ ಪ್ರಕಾರದ ಕೃತಿಗಳಿಗೆ ವಿಮರ್ಶಕರ ಅಭಿಪ್ರಾಯ ಗಳನ್ನು ಆಧರಿಸಿ ವರ್ಷದ ಅತ್ಯುತ್ತಮ ಕೃತಿ ಬಹುಮಾನಕ್ಕೆ ನಾಟಕ ಪ್ರಕಾರದಲ್ಲಿ ಡಾ.ಚಂದ್ರು ಕಾಳೇನಹಳ್ಳಿ ಅವರ ಗಂಧವತಿ, ಡಾ.ಹಂಪನಹಳ್ಳಿ ತಿಮ್ಮೇಗೌಡ ಅವರ ಸಂಶೋಧನಾ ಕೃತಿ ದಾಸೊಕ್ಕಲಿಗರು ಹಾಗು ಕಾವ್ಯ ಪ್ರಕಾರದ ಚಲಿಸುತ್ತಿವೆ ಚುಕ್ಕಿಗಳು ಪಿ.ಭಾರತೀದೇವಿ ಅವರ ಕೃತಿಗಳು ಆಯ್ಕೆಯಾಗಿವೆ.

ಚನ್ನರಾಯಪಟ್ಟಣ ತಾಲ್ಲೂಕಿನ ಕಾಳೇನಹಳ್ಳಿಯವರಾದ ಡಾ.ಚಂದ್ರು ಕಾಳೇನಹಳ್ಳಿ ಅವರು ಖ್ಯಾತ ಜಾನಪದ ವಿದ್ವಾಂಸ, ನಾಟಕಾರ, ರಂಗಕರ್ಮಿಯಾಗಿದ್ದಾರೆ. ಈ ಹಿಂದೆ ಜಾನಪದ ಅಕಾಡೆಮಿ ವಾರ್ಷಿಕ ಪ್ರಶಸ್ತಿಗೆ 2021ರಲ್ಲಿ ಆಯ್ಕೆಯಾಗಿದ್ದರು.

ಡಾ.ಹಂಪನಹಳ್ಳಿ ತಿಮ್ಮೇಗೌಡ ಅವರು ಜಿಲ್ಲೆಯ ಜಾನಪದ ವಿದ್ವಾಂಸ, ಸಾಹಿತಿ, ಸಂಶೋಧಕರಾಗಿ ಗುರುತಿಸಿಕೊಂಡಿದ್ದಾರೆ. 2020ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

ಪತ್ರಕರ್ತ ಸತೀಶ್ ಶಿಲೆ ಅವರ ಪತ್ನಿಯಾಗಿರುವ ಭಾರತಿದೇವಿ ಅವರು ಕವಯತ್ರಿ, ಅಂಕಣ ಗಾರ್ತಿಯಾಗಿ ಗುರುತಿಸಿ » ನಾಲ್ಕನೇ ಪುಟದಲ್ಲಿ

# ಹೆಣಭಾರದಷ್ಟು ಕೆಲಸ ಮಾಡಿದರೂ ಸಿಗದ ವೇತನ

### ಪಾಲಿಕೆ ಕಮ್ಯುನಿಟಿ ಮೊಬೈಲರ್‌ಗಳಿಗಿಲ್ಲ ಸಂಬಳ | ಕುಟುಂಬ ನಿರ್ವಹಣೆ ಸಂಕಷ್ಟ

ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಮಹಾನಗರ ಪಾಲಿಕೆಯಲ್ಲಿ ಅಗತ್ಯಕ್ಕೆ ತಕ್ಕಂತೆ ಖಾಯಂ ನೌಕರರಿಲ್ಲದೆ ಸುಗಮ ಕಾರ್ಯಕ್ಕಾಗಿ ಹೊರಗುತ್ತಿಗೆ ಆಧಾರದಡಿ ನೇಮಿಸಿಕೊಂಡಿರುವ 22 ಮಹಿಳಾ ಕಮ್ಯುನಿಟಿ ಮೊಬೈಲರ್‌ಗಳಿಗೆ ಕಳೆದ ನಾಲ್ಕು ತಿಂಗಳಿನಿಂದ ವೇತನ ನೀಡದೆ ಸತಾಯಿಸಲಾಗುತ್ತಿದೆ.

ಕಳೆದ ಎಂಟು ತಿಂಗಳಿನಿಂದ ಕೆಲಸ ಮಾಡುತ್ತಿರುವ ಮಹಿಳೆಯರು ಈ ವರೆಗೆ ಎರಡು ಬಾರಿ ಮಾತ್ರ ಸಂಬಳ ಪಡೆದಿದ್ದಾರೆ. 2025ರ ಡಿಸೆಂಬರ್‌ನಿಂದ ಮಾರ್ಚ್ ವರೆಗಿನ ಸಂಬಳ ಇನ್ನೂ ತಲುಪಿಲ್ಲ. ಪ್ರತಿ ನಾಲ್ಕು ತಿಂಗಳಿಗೊಮ್ಮೆಯಷ್ಟೇ ವೇತನ ಪಾವತಿಯಾಗುತ್ತಿದೆ. ಆದರೆ, ಮಾಡುವ ಕೆಲಸ ಮಾತ್ರ ಹೆಣಭಾರದ್ದಾಗಿದೆ.

ಎಸ್‌ಎಸ್‌ಎಲ್‌ಸಿ ಪೂರೈಸಿದ, ಮಹಾನಗರ ಪಾಲಿಕೆ ಸ್ತ್ರೀ ಶಕ್ತಿ ಸಂಘದ ಸದಸ್ಯರನ್ನು ಕಮ್ಯುನಿಟಿ ಮೊಬೈಲರ್ ಎಂದು ಗುರುತಿಸಿ ಕೆಲಸ ಕೊಟ್ಟಿರುವ ಸರ್ಕಾರ ತಲಾ 18,300 ರೂ. ವೇತನ ನಿಗದಿಪಡಿಸಿದೆ. ಸಂಬಳಕ್ಕಾಗಿ ನೌಕರರು ನಿತ್ಯ ಮೇಲಾಧಿಕಾರಿಗಳ ಬಳಿ ಅಂಗಲಾಚುವಂತಾಗಿದೆ. ಕುಟುಂಬ ನಿರ್ವಹಣೆಗಾಗಿ ದುಡಿಮೆ ಅತ್ಯಗತ್ಯವಾಗಿದ್ದು, ಸರ್ಕಾರ ಕೆಲಸ ಮಾಡಿಸಿಕೊಂಡು ಮೋಸ ಮಾಡುತ್ತಿದೆ ಎಂದು ನೌಕರರು ಅಳಲು ತೋಡಿಕೊಂಡರು.



**ಶ್ರಮದ ಕೆಲಸಕ್ಕೆ ಬೆಲೆಯೇ ಇಲ್ಲ**

ಕಮ್ಯುನಿಟಿ ಮೊಬೈಲರ್‌ಗಳು ಮಾಡುತ್ತಿರುವ ಕೆಲಸ ಅತ್ಯಂತ ಕಷ್ಟಕರವಾಗಿದೆ. ಬೆಳಿಗ್ಗೆ 6.30 ರಿಂದ 10.30ರ ವರೆಗೆ ವಾರ್ಡ್‌ವಾರು ಕಸ ಸಂಗ್ರಹ ವಾಹನಗಳ ಜೊತೆಗೆ ಹೋಗುವ ಅವರು ಹಸಿ ಹಾಗು ಒಣ ಕಸ ಬೇರ್ಪಡಿಸಿ ಹಾಕುವಂತೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು. ಸಾರ್ವಜನಿಕರು ಕಸವನ್ನು ಒಟ್ಟಿಗೆ ಹಾಕುತ್ತಿದ್ದರೆ ತಡೆದು ಬೇರ್ಪಡಿಸಿಯೇ ಹಾಕುವಂತೆ ನೋಡಿಕೊಳ್ಳಬೇಕು. ಈ ಸಂದರ್ಭದಲ್ಲಿ ಸ್ಥಳೀಯರು ಗಲಾಟೆಗೆ ಮುಂದಾಗುವ ಪ್ರಸಂಗ ಅತ್ಯಧಿಕವಾಗಿದೆ. ಈ ಕೆಲಸ ಮುಗಿದ ಬಳಿಕ ಬೆಳಿಗ್ಗೆ 11 ರಿಂದ ಸಂಜೆ 5ರ ವರೆಗೆ ಕಂದಾಯ ವಿಭಾಗದ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು. ಪಾಲಿಕೆಗೆ ಕಂದಾಯ ಪಾವತಿಸದಿರುವವರ ಮಳಿಗೆಗೆ ತೆರಳಿ ನೋಟೀಸ್ ನೀಡುವ ಕೆಲಸವನ್ನು ನಿತ್ಯ ಮಾಡಲೇಬೇಕಿದೆ. ನಂತರ ಸಾರ್ವಜನಿಕರ ಅಹವಾಲು ಸ್ವೀಕರಿಸುವುದಕ್ಕಾಗಿ ಪಾಲಿಕೆಯಿಂದ ಸಹಾಯವಾಣಿ (74111 10719) ತೆರೆದಿದ್ದು, ಆ ಕೆಲಸವನ್ನೂ ಇವರೇ ಮಾಡಬೇಕಿದೆ. ದಿನದ 24 ಗಂಟೆಯೂ ಸಹಾಯವಾಣಿ ಇರುವುದರಿಂದ ಪಾಳಿ ಆಧಾರದಲ್ಲಿ ಕೆಲಸ ಮಾಡುತ್ತಾರೆ. ಈ ವರೆಗೆ 500ಕ್ಕೂ ಅಧಿಕ ಕರೆಗಳು ಬಂದಿದ್ದು, ತುರ್ತು ಪರಿಹಾರ ಕ್ರಮ ಕೈಗೊಳ್ಳಲಾಗುತ್ತಿದೆ. ಚರಂಡಿ ದುರಸ್ತಿ, ವಿದ್ಯುತ್, ಕುಡಿಯುವ ನೀರು ಹೀಗೆ ನಾನಾ ಕಷ್ಟಗಳನ್ನು ಹೇಳಿ ಜನರು ಕರೆ ಮಾಡುತ್ತಾರೆ. ಅವುಗಳಿಗೆ ಪರಿಹಾರ ಕಲ್ಪಿಸುವುದು ಇವರ ಆದ್ಯತೆಯಾಗಿರುತ್ತದೆ. ಇಷ್ಟೆಲ್ಲಾ ಶ್ರಮ ವಹಿಸಿ ದುಡಿದರೂ ಮಾಡಿದ ಕೆಲಸಕ್ಕೆ ಪ್ರತಿಫಲ ಇಲ್ಲದಂತಾಗಿದೆ.

**ಸುರಕ್ಷತಾ ಸಾಧನಗಳೂ ಇಲ್ಲ**

ನೌಕರರಿಗೆ ವೇತನ ನೀಡದಿರುವುದು ಮಾತ್ರವಲ್ಲದೆ ಕಸ ವಿಲೇವಾರಿ ವಾಹನಗಳ ಜೊತೆಗೆ ಬರುವ ಮಹಿಳೆಯರಿಗೆ ಸುರಕ್ಷಿತ ಮಾಸ್ಕ್, ಸ್ಯಾನಿಟೈಸರ್ ಸಾಧನಗಳನ್ನು ಸಹ ನೀಡುತ್ತಿಲ್ಲ. ಆಟೋ, ಟಿಪ್ಪರ್‌ಗಳಲ್ಲಿ ಗಬ್ಬು ವಾಸನೆ ಬೀರುತ್ತದೆ. ಕೆಲವು ಸಲ ನೌಕರರೇ ಕಸ ಬೇರ್ಪಡಿಸುವ ಸಂದಿಗ್ಧತೆಯೂ ನಿರ್ಮಾಣವಾಗುತ್ತದೆ. ಆದರೆ, ಮಹಿಳೆಯರ ಆರೋಗ್ಯ ಹಿತದೃಷ್ಟಿಯಿಂದ ಕ್ರಮ ಕೈಗೊಂಡಿಲ್ಲ. ಮನೆಯಿಂದ ಕಚೇರಿಗೆ ಆಟೋ ಮೂಲಕ ಹೋಗಬೇಕು. ಕೆಲವರು ಕಾಲ್ನಡಿಗೆಯಲ್ಲಿ ತಲುಪುತ್ತಾರೆ. ಪ್ರತಿ ತಿಂಗಳು ನಿಗದಿತ ಸಮಯಕ್ಕೆ ವೇತನ ನೀಡಿದರೆ ಸಮಸ್ಯೆಯಾಗುವುದಿಲ್ಲ. ಬೆಳಿಗ್ಗೆಯಿಂದ ಸಂಜೆವರೆಗೆ ಕೆಲಸದಲ್ಲೇ ಮಗ್ನರಾಗುಗಿರುತ್ತೇವೆ. ಆದರೆ, ಸಂಬಳ ಮಾತ್ರ ಇಲ್ಲ. ಹೀಗಾಗಿ ಕುಟುಂಬ ನಿರ್ವಹಣೆಗೂ ತೊಡಕಾಗಿದೆ ಎನ್ನುತ್ತಾರೆ ನೌಕರರು.

> **ಮೂರು ವರ್ಷಗಳವರೆಗೆ ಕಮ್ಯುನಿಟಿ ಮೊಬೈಲರ್ಸ್‌ಗಳೆಂದು ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ. ನಾಲ್ಕು ತಿಂಗಳಿಂದ ಸಂಬಳ ನೀಡಿಲ್ಲ. 22 ನೌಕರರು ಕೆಲಸ ಬಿಟ್ಟು ಸಂಬಳಕ್ಕಾಗಿ ಪಟ್ಟು ಹಿಡಿದರಷ್ಟೇ ವಾರದ ಬಳಿಕ ಹಣ ಪಾವತಿಯಾಗುತ್ತದೆ. ಅದರಲ್ಲೂ ಮತ್ತೆ ಎರಡು ತಿಂಗಳ ವೇತನ ತಡೆ ಹಿಡಿಯುತ್ತಾರೆ.**
> **-ಕಮ್ಯುನಿಟಿ ಮೊಬೈಲರ್ಸ್ ನೌಕರರು**

## ಬಸ್ ನಿಲ್ದಾಣದಲ್ಲಿ ಮೂಲಸೌಕರ್ಯ ಕೊರತೆ: ಪ್ರತಿಭಟನೆ

• ಪ್ರಜೋದಯ ವರದಿ

**ಅರಸೀಕೆರೆ:** ನಗರದಲ್ಲಿ ನಿರ್ಮಾಣಗೊಂಡಿರುವ ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ಮೂಲ ಸೌಕರ್ಯಗಳಿಲ್ಲದೇ ಪ್ರಯಾಣಿಕರು ಪರದಾಡುತ್ತಿದ್ದಾರೆಂದು ಆರೋಪಿಸಿ ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಬುಧವಾರ ಸಂಜೆ ಬೆಂಬಲಿಗರೊಂದಿಗೆ ದಿಢೀರ್ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಅಭಿವೃದ್ಧಿ ಹೆಸರಿನಲ್ಲಿ 20 ಕೋ.ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲು ಹೊರಟಿರುವ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರ ಕೃಪಾಪೋಷಿತ ನೂತನ ಬಸ್ ನಿಲ್ದಾಣಕ್ಕೆ ಪರ್ಯಾಯವಾಗಿ ನಿರ್ಮಾಣ ಮಾಡಿರುವ ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ಮೂಲಸೌಕರ್ಯಗಳಿಲ್ಲದೆ ಪ್ರಯಾಣಿಕರು ಸಮಸ್ಯೆ ಎದುರಿಸುತ್ತಿದ್ದಾರೆ. ತರಾತುರಿಯಲ್ಲಿ ಬಸ್ ನಿಲ್ದಾಣ ಮಾಡಲಾಗುತ್ತಿದೆಂದು ಆರೋಪಿಸಿದರು.



ಸಾಕಷ್ಟು ತಂತ್ರಜ್ಞಾನ ಮುಂದುವರೆದಿದ್ದರೂ ತಾತ್ಕಾಲಿಕ ಬಸ್ ನಿಲ್ದಾಣದ ಧೂಳು ನಿವಾರಿ ಸುವ ನಿಟ್ಟಿನಲ್ಲಿ ಆವರಣ ಅಭಿವೃದ್ಧಿ ಪಡಿಸದಿರುವುದರಿಂದ ಅಸ್ತಮಾ ರೋಗಕ್ಕೆ ತುತ್ತಾಗುವ ಭೀತಿಯನ್ನು ಪ್ರಯಾಣಿಕರು ಎದುರಿಸುತ್ತಿದ್ದಾರೆ. ಈ ತಾತ್ಕಾಲಿಕ ನಿಲ್ದಾಣದಲ್ಲಿ ವಿದ್ಯುತ್ ಸರಬರಾಜಿಲ್ಲದೆ, ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ. ಕೇವಲ ಎರಡು ಶೌಚಾಲಯ ನಿರ್ಮಿಸಿ ಅಧಿಕಾರಿಗಳು ಕೈತೊಳೆದುಕೊಂಡಿದ್ದಾರೆಂದು ದೂರಿದ ಅವರು, ಅವ್ಯವಸ್ಥೆಗಳ ಆಗರ ವಾಗಿರುವ ತಾತ್ಕಾಲಿಕ ಬಸ್ ನಿಲ್ದಾಣ ಸರಿಪಡಿಸಿ, ವ್ಯವಸ್ಥಿತವಾಗಿ ಮೂಲಭೂತ ಸೌಕರ್ಯ ಕಲ್ಪಿಸಬೇಕು. ಇಲ್ಲದಿದ್ದರೆ ಹೋರಾಟ ಮುಂದುವರೆಸಲಿದ್ದೇವೆಂದು ಎಚ್ಚರಿಸಿದರು.

ಜನರ ಆರೋಗ್ಯ ಕಿತ್ತುಕೊಳ್ಳುತ್ತಿರುವ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಮಾನವೀಯತೆ, ಅನು ಕಂಪ ಎಂಬುದು ಇದ್ದರೇ ಕೂಡಲೇ ತಾತ್ಕಾಲಿಕ ಬಸ್ ನಿಲ್ದಾಣದ ಅವ್ಯವಸ್ಥೆ ಸರಿಪಡಿಸಬೇಕೆಂದು ಆಗ್ರಹಿಸಿದರು.

ದುಮ್ಮೇನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಅಮ್ಮನಹಟ್ಟಿ ಅಜ್ಜಪ್ಪ, ಮಾಜಿ ಸದಸ್ಯ ಜಯರಾಂ ಬ್ಯಾಡರಹಳ್ಳಿ, ಮುಖಂಡರಾದ ಗುರುಸಿದ್ದೇಶ್, ಗೀಜಿಹಳ್ಳಿ ಲಿಂಗರಾಜು, ಬೈರಗೊಂಡನಹಳ್ಳಿ ಉಮೇಶ್, ಯಜಗೊಂಡನಹಳ್ಳಿ ಉಪೇಂದ್ರ, ಪೃಥ್ವಿ, ಪ್ರಸಾದ್, ಶಿವನ್ ರಾಜ್, ಆನಂದ್, ನಗರಸಭೆ ಮಾಜಿ ಸದಸ್ಯ ಭಾಸ್ಕರ್ ಹಾಜರಿದ್ದರು.

## ನಿವೃತ್ತ ಖಜಾನೆ ಅಧಿಕಾರಿ ನಿಧನ

• ಪ್ರಜೋದಯ ವರದಿ



**ಹಾಸನ:** ನಿವೃತ್ತ ಖಜಾನೆ ಅಧಿಕಾರಿ ಎನ್.ಆರ್. ಶಂಕರನಾರಾಯಣ (81) ಅವರು ಬುಧವಾರ ನಿಧನರಾದರು.

ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಮೃತರಿಗೆ ಮೂವರು ಗಂಡು ಮಕ್ಕಳಿದ್ದಾರೆ. ಕುವೆಂಪು ನಗರದ ನಿವಾಸದಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದರು. ಗುರುವಾರ ಬೆಳಿಗ್ಗೆ 11.30ಕ್ಕೆ ಬಿಟ್ಟಗೌಡನಹಳ್ಳಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ಜರುಗಲಿದೆ.

## ನಡು ರಸ್ತೆಯಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀದಿ ರಂಪಾಟ

• ಪ್ರಜೋದಯ ವರದಿ

**ಹಾಸನ:** ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದು ಹೊರಬರುತ್ತಿದ್ದ ವಿದ್ಯಾರ್ಥಿಗಳು ಪರಸ್ಪರ ಹೊಡೆ ದಾಡಿಕೊಂಡಿರುವ ಘಟನೆ ನಗರದ ಗಂಧದ ಕೋಠಿ ಸರ್ಕಾರಿ ಪದವಿ ಪೂರ್ವ ಕಾಲೇಜು ಮುಂಭಾಗ ಬುಧವಾರ ನಡೆದಿದೆ.

ಮಧ್ಯಾಹ್ನ 1.30ಕ್ಕೆ ಪರೀಕ್ಷೆ ಮುಗಿಸಿಕೊಂಡು ಹೊರ ಬಂದ ವಿದ್ಯಾರ್ಥಿಯೊಬ್ಬ ಮುಂದೆ ಹೊರಟಿದ್ದವನಿಗೆ ಹಿಂದಿನಿಂದ ಹೋಗಿ ಹೊಡೆದಿದ್ದಾನೆ. ತಕ್ಷಣ ಸುತ್ತುವರೆದ ಬೇರೆ ವಿದ್ಯಾರ್ಥಿ ಗಳು ಹಿಡಿದು ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಮತ್ತೊಂದು ಗುಂಪು ಇನ್ನೊಬ್ಬ ವಿದ್ಯಾರ್ಥಿ ಮೇಲೆ ಏಕಾಏಕಿ ಎಗರಿ ಬಿದ್ದಿದೆ. ಸ್ಕೂಲ್ ಬ್ಯಾಗ್, ಸಮವಸ್ತ್ರ ಹರಿದು ಮನ ಬಂದಂತೆ ಥಳಿಸಿದ್ದಾರೆ. ಬೆಳಿಗ್ಗೆ ಪರೀಕ್ಷೆಗೆ ಹೋಗುವಾಗಲೇ ವಿದ್ಯಾರ್ಥಿಗಳು ಗಲಾಟೆ ಮಾಡಿಕೊಂಡಿದ್ದರು ಎನ್ನಲಾಗಿದೆ.

ವಿಷಯ ತಿಳಿದು ಪೊಲೀಸರು ದೌಡಾಯಿಸುತ್ತಿದ್ದಂತೆ ಹಲ್ಲೆ ಮಾಡುತ್ತಿದ್ದ ವಿದ್ಯಾರ್ಥಿಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಓಡಿದರು. ಗಲಾಟೆಯಲ್ಲಿ ಹೊಡೆತ ತಿಂದ ವಿದ್ಯಾರ್ಥಿಗಳು ಖಾಸಗಿ ಶಿಕ್ಷಣ ಸಂಸ್ಥೆಯವರಾಗಿದ್ದಾರೆ. ಗುರುವಾರ ಪ್ರಕರಣ ದಾಖಲಿಸುವುದಾಗಿ ವಿದ್ಯಾರ್ಥಿಗಳ ಪೋಷಕರು ತಿಳಿಸಿದ್ದಾರೆ. ಎಸ್‌ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳೇ ನಡು ರಸ್ತೆಯಲ್ಲೇ ಹೊಡೆದಾಡಿ ಕೊಂಡಿ ರುವುದು ಸಾಕಷ್ಟು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.



## ರೌಡಿಶೀಟರ್ ಅನುಮಾನಾಸ್ಪದ ಸಾವು

• ಪ್ರಜೋದಯ ವರದಿ



**ಬೇಲೂರು:** ಹುಟ್ಟುಹಬ್ಬದ ಪಾರ್ಟಿ ಮಾಡಲು ತೆರಳಿದ್ದ ರೌಡಿಶೀಟರ್ ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ಕುಟುಂಬಸ್ಥರು ಕೊಲೆ ಶಂಕೆ ವ್ಯಕ್ತಪಡಿಸಿದ್ದಾರೆ. ಕಾರ್ತಿಕ್ (36) ಮೃತ ರೌಡಿ ಶೀಟರ್.

ಮಂಗಳವಾರ ತಾಲ್ಲೂಕಿನ ತೊಳಲು ಗ್ರಾಮದ ಬಳಿಯ ಬಾರ್‌ವೊಂದರಲ್ಲಿ ಸ್ನೇಹಿತರೊಂದಿಗೆ ಹುಟ್ಟುಹಬ್ಬದ ಪಾರ್ಟಿ ಆಚರಿಸಿಕೊಂಡಿದ್ದ ಕಾರ್ತಿಕ್, ಬುಧವಾರ ಬೆಳಿಗ್ಗೆ ಕೋಟಿಗಾನಹಳ್ಳಿ ಬಳಿ ಗಂಭೀರವಾಗಿ ಗಾಯಗೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದ. ಕೂಡಲೇ ಆತನನ್ನು ಆಸ್ಪತ್ರೆಗೆ ದಾಖಲು ಮಾಡಿದ್ದರೂ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾನೆ. ಹಳೆ ದ್ವೇಷದ ಹಿನ್ನಲೆ ಹತ್ಯೆ ಮಾಡಲಾಗಿದೆ ಎಂದು ಶಂಕೆ ವ್ಯಕ್ತಪಡಿಸಿ ಮೃತರ ಸಹೋದರ ಕೌಶಿಕ್ ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.


### ಬಾವಿ, ಕೊಟ್ಟಿಗೆ ನಿರ್ಮಾಣ, ಅಡಿಕೆ ಬೆಳೆಗೆ ಇನ್ನೂ ಬಂದಿಲ್ಲ ಸಹಾಯಧನ

# ನರೇಗಾ: ವೈಯಕ್ತಿಕ ಯೋಜನೆ ಫಲಾನುಭವಿಗಳು ಅತಂತ್ರ

• ಪ್ರಜೋದಯ ವರದಿ

**ಹಾಸನ:** ನರೇಗಾ ಯೋಜನೆ ಹೆಸರನ್ನು ವಿಜಿ-ಜಿ ರಾಮ್-ಜಿ ಎಂದು ಬದಲಾಯಿಸಿರುವುದರಿಂದ ಈ ಹಿಂದೆ ಯೋಜನೆಯಡಿ ಕೈಗೊಂಡ ಹಲವು ಕೆಲಸ ಕಾರ್ಯಗಳಿಗೆ ಹಣ ಬಿಡುಗಡೆಯಾಗದೆ ಫಲಾನುಭವಿಗಳು ಅತಂತ್ರ ಸ್ಥಿತಿಗೆ ಸಿಲುಕಿದ್ದಾರೆ.

ಜಾಬ್ ಕಾರ್ಡ್ ಹೊಂದಿರುವ ಜನರು, ಕೂಲಿ ಕಾರ್ಮಿಕರು ಗ್ರಾಮ ಪಂಚಾಯಿತಿಗಳ ಮೂಲಕ ನರೇಗಾ ಯೋಜನೆಯಡಿ ರಿಂಗ್ ಬಾವಿ, ದನದ ಕೊಟ್ಟಿಗೆ, ಕುರಿ-ಕೋಳಿ ಸಾಕಾಣಿಕೆ ಶೆಡ್, ಕೃಷಿ ಭೂಮಿ ಸಮತಟ್ಟು, ತೋಟಗಳಲ್ಲಿ ನೀರು ಗುಂಡಿ, ನಮ್ಮ ಹೊಲ-ನಮ್ಮ ರಸ್ತೆ ಹಾಗು ಅಡಿಕೆ, ಕಾಳು ಮೆಣಸು ಗಿಡಗಳನ್ನು ಬೆಳೆಯಲು ಸಹಾಯಧನ ನೀಡಲು, ಗ್ರಾಮಸಭೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ, ಜನರಿಗೆ ಅಗತ್ಯವಿದ್ದ ಸೌಲಭ್ಯ ಪಡೆದುಕೊಳ್ಳಲು ಮಂಜೂರಾತಿ ನೀಡಲಾಗಿತ್ತು. ಆದರೆ, ಯೋಜನೆ ಹೆಸರು ಬದಲಾಗಿರುವುದರಿಂದ ಕಾಮಗಾರಿ ಪೂರ್ಣಗೊಂಡರೂ ಅನುದಾನ ಸಿಗದೆ ಜನರು ತೊಂದರೆಗೆ ಸಿಲುಕಿದ್ದಾರೆ.




### ಮನೆ ನಿರ್ಮಾಣದ ಬಿಲ್ ಬಾಕಿ

ನರೇಗಾ ಯೋಜನೆಯ ಹಣ ಬಿಡುಗಡೆಯಾಗದಿರುವುದು ಒಂದೆಡೆಯಾದರೆ, ಸರ್ಕಾರ ಗ್ರಾಮ ಪಂಚಾಯಿತಿಗಳ ಮೂಲಕ ಮಂಜೂರು ಮಾಡಿರುವ ಮನೆಗಳ ಬಿಲ್ ಕೂಡ ಕೈಸೇರದೆ ಇರುವುದರಿಂದಲೂ ಮನೆ ನಿರ್ಮಾಣ ಕೆಲಸ ಅರ್ಧಕ್ಕೆ ನಿಂತಿದೆ.
ಕೆಲ ಮನೆಗಳಿಗೆ ಅಡಿಪಾಯದ ಬಿಲ್ ಮಾತ್ರ ಹಾಕಿ, ಗೋಡೆ ಬಿಲ್ ಹಾಕಿಲ್ಲ. ಕೆಲ ಫಲಾನುಭವಿಗಳಿಗೆ ಅಡಿಪಾಯ, ಗೋಡೆ ನಿರ್ಮಾಣಕ್ಕೆ ಹಣ ನೀಡಿ, ಛಾವಣಿ ಬಿಲ್ ಬಾಕಿ ಉಳಿದಿದೆ. ಹೀಗಾಗಿ ಮನೆ ನಿರ್ಮಾಣ ಕಾಮಗಾರಿ ಅರ್ಧಂಬರ್ಧವಾಗಿದೆ. ಕೇಳಿದರೆ ಸರ್ಕಾರವೇ ಹಣ ಬಿಡುಗಡೆ ಮಾಡಿಲ್ಲವೆಂದು ಅಧಿಕಾರಿಗಳು ಸಿದ್ಧ ಉತ್ತರ ನೀಡುತ್ತಿಲ್ಲ ಎಂದು ಫಲಾನುಭವಿಗಳು ಅಸಹಾಯತೆ ವ್ಯಕ್ತಪಡಿಸಿದ್ದಾರೆ.

ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ (ಮನರೇಗಾ) ಯೋಜನೆಯಡಿ ದನದ ಕೊಟ್ಟಿಗೆ ನಿರ್ಮಾಣ ಮಾಡಿಕೊಳ್ಳಲು 50 ಸಾವಿರ ರೂ., ಕುರಿ ಶೆಡ್ ನಿರ್ಮಾಣಕ್ಕೆ 1 ಲ.ರೂ., ರಿಂಗ್ ಬಾವಿ ನಿರ್ಮಾಣಕ್ಕೆ 1.50 ಲ.ರೂ., ಅಡಿಕೆ ಗಿಡಗಳನ್ನು ಬೆಳೆಯಲು ಒಂದು ಎಕರೆಗೆ 40 ಸಾವಿರ ರೂ. ಹೀಗೆ ವಿವಿಧ ವೈಯಕ್ತಿಕ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ಯೋಗ ಖಾತ್ರಿ ಯೋಜನೆಯಡಿ ಅವಕಾಶ ನೀಡಿದ್ದರಿಂದ ಫಲಾನುಭವಿಗಳು ಯೋಜನೆಯಿಂದ ನೆರವು ಸಿಗುತ್ತದೆ ಎಂದು ಕೆಲವರು ಕೆಲಸವನ್ನು ಪೂರ್ಣಗೊಳಿಸಿದ್ದಾರೆ, ಇನ್ನು ಕೆಲವರು ಹಣ ಸಿಗದೆ ಅರ್ಧಕ್ಕೆ ನಿಲ್ಲಿಸಿದ್ದಾರೆ.

ದನದ ಕೊಟ್ಟಿಗೆ, ಕುರಿ ಶೆಡ್, ಅಡಿಕೆ ಗಿಡಗಳನ್ನು ಹಾಕಿರುವ ರೈತರು ನರೇಗಾ ಯೋಜನೆಯಡಿ ಅನುದಾನದ ಬರದೆ ಗ್ರಾಮ ಪಂಚಾಯಿತಿ ಕಚೇರಿಗೂ, ಮನೆಗೂ ಅಲೆಯುವಂತಾಗಿದೆ. ಅಧಿಕಾರಿಗಳನ್ನು ಕೇಳಿದರೆ, ವಿಜಿಬಿ ರಾಮ್ ಜಿ ಯೋಜನೆ ಅನುಷ್ಠಾನದ ಬಗ್ಗೆ ಹಾಗು ಅನುದಾನ ಹಂಚಿಕೆ ಬಗ್ಗೆ ಯಾವುದೇ ಸ್ಪಷ್ಟ ನಿರ್ದೇಶನ ಬಂದಿಲ್ಲ. ಹೀಗಾಗಿ ಹಣ ಬಿಡುಗಡೆ ಸಾಧ್ಯವಿಲ್ಲವೆಂದು ಉತ್ತರ ನೀಡುತ್ತಿದ್ದಾರೆ.

ಕೆಲಸ ಅರ್ಧಕ್ಕೆ ಸ್ಥಗಿತ

ಒಮ್ಮೆ ಸೌಲಭ್ಯ ಪಡೆಯಲು ವರ್ಷವಿಡಿ ಕಾದು, ಅರ್ಜಿ ಸಲ್ಲಿಸಿ ಗ್ರಾಮ ಸಭೆಯಲ್ಲಿ ಆಯ್ಕೆಯಾಗಿ, ಎಷ್ಟೋ ದಿನಗಳ ನಂತರ ಮಂಜೂರಾತಿ ದೊರೆತ ತಕ್ಷಣ ಜನರು ಕೆಲಸಗಳನ್ನು ಕೈಗೊಂಡರೂ ನಿಗದಿತ ಅವಧಿಯಲ್ಲಿ ಹಣ ಮಂಜೂರಾಗದಿ » ನಾಲ್ಕನೇ ಪುಟದಲ್ಲಿ

** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ(K.S.R.T.C )**

ITI ANY TRADE ಮಾಡಿರುವ
ಪುರುಷರು ಹಾಗೂ ಮಹಿಳೆಯರು
(ಚಿಕ್ಕಮಗಳೂರು ವಿಭಾಗ)
**ಬೇಕಾಗಿದ್ದಾರೆ**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಿಕ್ಕಮಗಳೂರು ವಿಭಾಗದ ಚಿಕ್ಕಮಗಳೂರು, ಕಡೂರು, ಬೇಲೂರು, ಅರಸೀಕೆರೆ, ಮೂಡಿಗೆರೆ, ಸಕಲೇಶಪುರ ಹಾಗೂ ವಿಭಾಗೀಯ ಕಾರ್ಯಾಗಾರ ಘಟಕಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ತಾಂತ್ರಿಕ ಸಹಾಯಕರು/ ಮೆಕ್ಯಾನಿಕ್ ಬೇಕಾಗಿದ್ದಾರೆ.

ಬೇಕಾದ ದಾಖಲಾತಿಗಳು:
1.AADHAR CARD
2.CASTE CERTIFICATE
3.DIPLOMA / ITI / APPRENTICE TRAINING IN ANY TRADE MARKS CARD
4.BANK PASSBOOK
5.SSLC MARKS CARD
6.PHOTOS-3
7.MEDICAL FITNESS CERTIFICATE

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಪ್ರಕಾಶ ಟಿ ಕಥೇರಿ
0821-3588801
ಮೊ: 9110692229, 8618943513.

# ಹೆಚ್ಚೆಚ್ಚು ಗಿಡ ಬೆಳೆಸುವುದರಿಂದ ಪರಿಸರ ಸಂರಕ್ಷಣೆ

## ಮಳೆಗಾಲ ಪ್ರಾರಂಭಕ್ಕೆ ಮುನ್ನ ಗಿಡಗಳ ಬೆಳೆಸಲು ಸಿದ್ಧತೆ ಕೈಗೊಳ್ಳಿ: ಡಿ.ಸಿ. ಸೂಚನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಹಾಗೂ ಗ್ರಾಮ ಪಂಚಾಯಿತಿಯ ವ್ಯಾಪ್ತಿಯನ್ನು ಸೌಂದರ್ಯಕರಣಗೊಳಿಸಿ ಪರಿಸರ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಹಾಗೂ ಮುಂದಿನ ಪೀಳಿಗೆಗೆ ಉತ್ತಮ ವಾತಾವರಣ ನಿರ್ಮಾಣ ಮಾಡುವ ಉದ್ದೇಶದಿಂದ ಅತಿ ಹೆಚ್ಚು ಗಿಡಗಳನ್ನು ಬೆಳೆಸುವ ಮೂಲಕ ಪರಿಸರವನ್ನು ಸಂರಕ್ಷಣೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಬುಧವಾರ ಹಾಸನ ಜಿಲ್ಲೆಗಳ ನಗರದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ಪ್ರಗತಿ ಪರಿಶೀಲನೆ ಹಾಗೂ ಹಸಿರು ಹಾಸನ




2026 ಕುರಿತು ಸಭೆ ನಡೆಸಿ ಮಾತನಾಡಿದ ಅವರು, ಹಸಿರು ಹಾಸನ ಅಭಿಯಾನ ಅನುಷ್ಠಾನಕ್ಕೆ ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮುನ್ನ ಗಿಡಗಳನ್ನು ಬೆಳೆಸಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಅವರು ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯ ಪ್ರತಿಯೊಂದು ಇಲಾಖೆ ವತಿಯಿಂದ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಸಿರು ಹಾಸನ 2026 ಅಭಿಯಾನದಡಿ ಕೆರೆ ಏರಿಗಳು, ಸರ್ಕಾರಿ ಕಚೇರಿಗಳು, ಶಾಲಾ- ಕಾಲೇಜುಗಳು, ಕ್ರೀಡಾಂಗಣದ ಆವರಣ, ಆಟದ ಮೈದಾನಗಳು, ಉದ್ಯಾನವನದ ಸುತ್ತ, ರಾಷ್ಟ್ರೀಯ- ರಾಜ್ಯ ಹೆದ್ದಾರಿ ಅಕ್ಕ ಪಕ್ಕದಲ್ಲಿ, ರಸ್ತೆ ವಿಭಜಕಗಳಲ್ಲಿ, ಆಸ್ಪತ್ರೆ ಆವರಣಗಳಲ್ಲಿ ಖಾಲಿ ಇರುವ ಸರ್ಕಾರಿ ಜಾಗದಲ್ಲಿ 5 ಲಕ್ಷ ಗಿಡಗಳನ್ನು ನೆಟ್ಟು ಬೆಳೆಸಬೇಕು ಎಂದರು.

ನಗರದ ಎಲ್ಲೆಂದರಲ್ಲಿ ತ್ಯಾಜ್ಯ ವಿಲೇವಾರಿ ಮಾಡುವವರಿಗೆ ದಂಡ ವಿಧಿಸಬೇಕು, ಚರಂಡಿಗಳನ್ನು ಸ್ವಚ್ಛಗೊಳಿಸಬೇಕು, ಕುಡಿಯುವ ನೀರಿಗೆ ಕಲುಷಿತ ವಾಗಬಾರದು, ನೀರಿನ ಗುಣ್ಣಮಟ್ಟವನ್ನು ಪರೀಕ್ಷೆಯಾಗಬೇಕು ಎಂದು ತಿಳಿಸಿದರು.

ನಗರೋತ್ಥಾನ ಯೋಜನೆಯಡಿ ಮಂಜೂರಾದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚನೆ ನೀಡಿದರಲ್ಲದೆ, ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವ ಆಗದಂತೆ ಎಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರುದ್ರಮುನಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಇಂದು ಹಲವೆಡೆ ವಿದ್ಯುತ್ ವ್ಯತ್ಯಯ



**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ 66/11ಕೆ.ವಿ ಬಸವಾಘಟ್ಟ, ವಿ.ವಿ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಮಾ 26 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ರವರೆಗೆ ಬಸವಾಘಟ್ಟ ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಜಾಡಘಟ್ಟ, ಆದಿಹಳ್ಳಿ, ರಂಗಾಪುರ ಬೆಲವತ್ತಳ್ಳಿ, ಬೈರಾಪುರ, ವೇದಾವತಿ, ಹೊನ್ನಾವರ, ಸಿದ್ದಾಪುರ, ಪೂಮಗಾಮೆ, ಬಸವಾಘಟ್ಟ, ಬಾಗೇಶಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಾಯಿಬೀಗ ಹಾಕಿಸಿಕೊಂಡು ಹರಕೆ ಸಲ್ಲಿಕೆ

## ಸಂಭ್ರಮದ ಕೋಡಮ್ಮ ದೇವಿ ಜಾತ್ರಾ ಮಹೋತ್ಸವ

• ಪ್ರಜೋದಯ ವರದಿ

ಹಾರನಹಳ್ಳಿ: ಇಲ್ಲಿನ ಗ್ರಾಮ ದೇವತೆ ಕೋಡಮ್ಮ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಕೋಡಮ್ಮ ದೇವಿ ದೇವಾಲಯದಲ್ಲಿ ಯಳವಾರೆ ಹುಚ್ಚಮ್ಮದೇವಿ ಸಮ್ಮುಖದಲ್ಲಿ ನೂರಾರು ಮಹಿಳೆಯರು ಕೋಡಮ್ಮ ಜಾತ್ರೇಯಲ್ಲಿ ಇಷ್ಟಾರ್ಥ ಸಿದ್ದಿಗಾಗಿ ತ್ರಿಶೂಲವಿರುವ ಬಾಯಿಬೀಗ ಕಳಸ ಹೊತ್ತು ಮೆರವಣಿಗೆಗೆ ಚಾಲನೆ ನೀಡಿದರು.

ಮಹಿಳೆಯರು ಕಲಶಗಳಿಗೆ ಹೊಂಬಾಳೆ ಕೆಂಪು ಬಿಳಿ ಮೊಗ್ಗು ಮುಡಿಸಿ ದೇವರ ಪ್ರಾರ್ಥನೆ ಮಾಡಿ ನೂರಾರು ಮಹಿಳೆಯರು ಬಾಯಿ ಬೀಗ ಚುಚ್ಚಿಸಿತಲೆಯ ಮೇಲೆ ಕಳಸ ಹೊತ್ತು ಕೊಂಡು ಬೇವಿನ ಮರದಮ್ಮ ದೇವಾಲಯ ಸೂತ್ತ ಪ್ರಕಾರಸೇವೆ ಮಾಡಿದರು ಉತ್ಸವಕ್ಕೆ ಅರೆವಾದ್ಯ ಕಹಳೆ ದೋಣ್ಣು ವಾಲಗ ವಾದ್ಯಗಳು ಉತ್ಸವಕ್ಕೆ ಮೆರಗು ನೀಡಿದವು.

ದೇವರ ವರ್ಣನೆಯ ಪದ



ಹೇಳುವ ಸೊಬಗು, ಕೇಳುವ ಮನಸ್ಸು ಇನ್ನೂ ನಮ್ಮ ಜಾನಪದ ಕಲೆ ಇರುವುದು ಇಂತಹ ಜಾತ್ರೆಗಳಲ್ಲಿ ಈ ವೇಳೆ ನೆರೆದಿದ್ದ ಭಕ್ತರು ಇವುಗಳನ್ನು ವಿಕ್ಷಿಸಿ ಕಣ್ತುಂಬಿಕೊಂಡರು ಕಲಶ ನೋಡಿ ದೇವರಲ್ಲಿ ಭಕ್ತಿ ಭಾವಗಳನ್ನು ಮೆರೆದರು.

ಶ್ರೀಹುಚ್ಚಮ್ಮ ದೇವಿಗೆ ಬಣ್ಣ ಬಣ್ಣ ಹೂವು, ಹೂವಿನ ಮೊಗ್ಗಿನ ಜಡೆ ಹೊಂಬಾಳೆ ಬೆಳ್ಳಿ ಚಿನ್ನದ ಆಭರಣಗಳ ಅಲಂಕಾರ ನಯನಮನೋಹರವಾಗಿತ್ತು. ಚಲುವರಾಯಸ್ವಾಮಿಗೆ ಹೂವಿನ ಅಲಂಕಾರ ಮನಮೋಹಕವಾಗಿತ್ತು.ಗ್ರಾಮದಲ್ಲಿ ಬಾಯಿ ಬೀಗ ಹೊತ್ತ ಮಹಿಳೆಯರು ಕಾಲ್ನಡಿಗೆಯಲ್ಲಿ ಮೆರವಣಿಗೆ ಮೂಲಕ ಸಾಗಿ ಕೋಡಮ್ಮ ದೇವಿ ಮೂಲಸನ್ನಿದಿಗೆ ಉತ್ಸವ ಸಾಗಿತ್ತು. ದೇಗುಲದಲ್ಲಿ ಪೂಜೆ ಸಲ್ಲಿಸಿ ಹರಕೆಯನ್ನು ತೀರಿಸುವ ಮೂಲಕ ಭಕ್ತಿ ಪರಿಕಾಷ್ಠೆ ಮೆರೆದರು.

# ಸಹಕಾರ ಸಂಘಕ್ಕೆ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘ (ಟಿಎಪಿಸಿಎಂಎಸ್) ಚುನಾವಣೆಯಲ್ಲಿ ಜೆಡಿಎಸ್ ಪಕ್ಷದ ಡಿ.ಇ. ಮಲ್ಲೇಗೌಡ ಅವರನ್ನು ಅಧ್ಯಕ್ಷರಾಗಿ ಹಾಗೂ ಪಟೇಲ್ ನಾಗೇಶ್ ಅವರನ್ನು ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಗುರುಮೂರ್ತಿ ಹೇಳಿದರು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜು ಮಾತನಾಡಿ, ಬೇಲೂರು ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘವು ಐತಿಹಾಸಿಕ ಹಾಗೂ ಆರ್ಥಿಕವಾಗಿ ಸದೃಢವಾದ ತಾಲೂಕು ಮಟ್ಟದ ಪ್ರಮುಖ ಸಹಕಾರ ಸಂಸ್ಥೆಯಾಗಿದೆ. ಗ್ರಾಮ ಪಂಚಾಯಿತಿ ಹಾಗೂ



ಪುರಸಭೆಗಳಲ್ಲಿ ಸೇವೆ ಸಲ್ಲಿಸಿರುವ ಮಲ್ಲೇಗೌಡ ಅವರು ಸಹಕಾರ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಅವರ ನೇತೃತ್ವದಲ್ಲಿ ಸಂಘ ಮತ್ತಷ್ಟು ಅಭಿವೃದ್ಧಿ ಹೊಂದಲಿದೆ ಎಂಬ ವಿಶ್ವಾಸವಿದೆ ಎಂದರು.

ನೂತನ ಅಧ್ಯಕ್ಷ ಡಿ.ಇ.ಮಲ್ಲೇಗೌಡ ಮಾತನಾಡಿ, ನನ್ನ ಆಯ್ಕೆಗೆ ಸಹಕಾರ ನೀಡಿ ಒಮ್ಮತದಿಂದ ಆಯ್ಕೆ ಮಾಡಿದ ಎಲ್ಲ ಹಿರಿಯ ಮತ್ತು ಕಿರಿಯ ನಿರ್ದೇಶಕರಿಗೆ ನಾನು ಚಿರಋಣಿಯಾಗಿದ್ದು, ಸಂಘದ ಏಳಿಗೆಗೆ ಶ್ರಮಿಸುತ್ತೇನೆ ಎಂದು ಹೇಳಿದರು.

ಈ ವೇಳೆ ಉಪಾಧ್ಯಕ್ಷ ಪಟೇಲ್ ನಾಗೇಶ್, ಬಲ್ಲೇನಹಳ್ಳಿ ರವಿಕುಮಾರ್, ಹೆಚ್.ಎಂ.ದಿನೇಶ್. ಬಿ.ಗಿರೀಶ್, ರಾಮಚಂದ್ರ, ಭುವನೇಶದ, ಭಾರತೀಗೌಡ, ಜಾನಕಮ್ಮ, ಬಿ.ಎಲ್.ಲಕ್ಷ್ಮಣ್ ತೀರ್ಥಕುಮಾರ್ ಹಾಗು ಮಾಜಿ ಅಧ್ಯಕ್ಷ ಎಸ್.ಕೆ.ನಾಗೇಶ್, ಸಿ.ಹೆಚ್. ಮಹೇಶ್, ಲೋಕೇಗೌಡ ಸೇರಿದಂತೆ ಇನ್ನಿತರರು ಹಾಜರಿದ್ದರು.

# ವಿದ್ಯಾರ್ಥಿಗಳಿಗೆ ಕಾನೂನು ಅರಿವು ಅತ್ಯಗತ್ಯ

• ಪ್ರಜೋದಯ ವರದಿ

**ಹಾಸನ:** ವಿದ್ಯಾರ್ಥಿ ದೆಸೆಯಲ್ಲಿಯೇ ಕಾನೂನಿನ ಮೂಲಭೂತ ಅರಿವು ಇರುವುದು ಅತ್ಯಂತ ಅವಶ್ಯಕ, ಇದು ಸಮಾಜದಲ್ಲಿ ಜವಾಬ್ದಾರಿಯುತ ಪ್ರಜೆಗಳಾಗಿ ಬದುಕಲು ಸಹಕಾರಿಯಾಗುತ್ತದೆ ಎಂದು ಗುಡ್ ಸಿಟಿಜನ್ ಪದವಿ ಕಾಲೇಜಿನ ಪ್ರಾಂಶುಪಾಲ ಎಂ.ಎನ್.ಕಾಂತರಾಜು ಅವರು ಸಲಹೆ ನೀಡಿದರು.

ನಗರದ ಎಂ.ಕೃಷ್ಣ ಕಾನೂನು ಮಹಾವಿದ್ಯಾಲಯದ ಕಾನೂನು ಅರಿವು-ನೆರವು ಘಟಕ ಹಾಗೂ ಗುಡ್ ಸಿಟಿಜನ್ ಪದವಿ ಪೂರ್ವ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಬುಧವಾರ 'ಕಾನೂನು ಅರಿವು ಮತ್ತು ನೆರವು' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಕಾನೂನು ಪ್ರಜ್ಞೆಯ ಅಗತ್ಯತೆಯನ್ನು ಸಾರಿದರು.



ಗುಡ್ ಸಿಟಿಜನ್ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಹೇಮಂತ್ ಕುಮಾರ್ ಅವರು ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ಅತ್ಯಮೂಲ್ಯವಾಗಿದ್ದು, ಬಾಲ್ಯದಿಂದಲೇ ಕಾನೂನು ಅರಿವು ಹೊಂದಿ ಅನ್ಯಾಯವನ್ನು ಪ್ರಶ್ನಿಸುವ ಧೈರ್ಯ ಬೆಳೆಸಿಕೊಳ್ಳಬೇಕೆಂದು ಹೇಳಿದರು.

ದ್ವಿತೀಯ ವರ್ಷದ ಕಾನೂನು ವಿದ್ಯಾರ್ಥಿ ಸಿ.ಎಂ.ಮನೋಜ್ ಅವರು ಮಾತನಾಡುತ್ತಾ, ಬಾಲ ನ್ಯಾಯ ಕಾಯ್ದೆ-2015ರ ಅಡಿಯಲ್ಲಿ ಮಕ್ಕಳ ರಕ್ಷಣೆ ಮತ್ತು ಪಾಲನೆಗೆ ಇರುವ ಅವಕಾಶಗಳನ್ನು ಪ್ರತಿ ಯೊಬ್ಬರೂ ಅರಿಯಬೇಕು, ಮಕ್ಕಳಿಗೆ ಸುರಕ್ಷಿತ ಪರಿಸರ ಕಲ್ಪಿಸುವುದು ಸಮಾಜದ ಕರ್ತವ್ಯ ಎಂದರು.

ವಿದ್ಯಾರ್ಥಿ ಮಮತ ಚೌಧರಿ ಅವರು 'ಪೋಕ್ಸೋ' ಕಾಯ್ದೆಯ ಬಗ್ಗೆ ವಿವರಣೆ ನೀಡಿ, ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸಲು ಇರುವ ಕಟ್ಟುನಿಟ್ಟಾದ ಕಾನೂನುಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಇರಬೇಕು, ದೌರ್ಜನ್ಯ ನಡೆದಾಗ ಮೌನ ವಹಿಸದೆ ಕಾನೂನಿನ ನೆರವು ಪಡೆಯಬೇಕು ಎಂದು ಕಿವಿಮಾತು ಹೇಳಿದರು.

ಎಂ.ಆರ್.ಕಿಶೋರ್ ಕುಮಾರ್ ಅವರು ಮಾತನಾಡಿ, ಬಾಲ ಕಾರ್ಮಿಕ ಪದ್ಧತಿ ಮತ್ತು ಬಾಲ್ಯ ವಿವಾಹವು ಸಮಾಜಕ್ಕೆ ಅಂಟಿದ ಶಾಪವಾಗಿದ್ದು, ಇವುಗಳನ್ನು ತಡೆಗಟ್ಟಲು ಕಾನೂನು ಎಷ್ಟು ಬಲಿಷ್ಠವಾಗಿದೆಯೋ ಅಷ್ಟೇ ಸಾರ್ವಜನಿಕರ ಸಹಕಾರವೂ ಅತೀ ಮುಖ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ನೂರಾರು ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗದವರು ಉಪಸ್ಥಿತರಿದ್ದು, ಕಾನೂನು ಮಾಹಿತಿಯನ್ನು ಪಡೆದುಕೊಂಡರು.

## ವಿಧುರ-ವಿಧವೆ ಸಮಾಲೋಚನೆ ಸಭೆ

**ಶಿವಮೊಗ್ಗ:** ನಗರದ ಶ್ರೀ ಕಲಾ ಕೌಶಲ್ಯಾಭಿವೃದ್ಧಿ ಕೇಂದ್ರದಲ್ಲಿ ಇದೇ ಮಾ.29 ರಂದು ಭಾನುವಾರ ಸರ್ವ-ಜಾತಿ-ಜನಾಂಗಗಳಿಗೆ ಸೇರಿದ ವಿಧುರ-ವಿಧವೆ ಪುನರ್ವಿವಾಹ ಸಮಾಲೋಚನೆ ಸಭೆ ಏರ್ಪಡಿಸಲಾಗಿದ್ದು, ಬೆಳಿಗ್ಗೆ 11-00 ಗಂಟೆಗೆ ವಿವಿಧೆಡೆಗಳಿಂದ ವಿಧುರ-ವಿಧವೆ ಹಾಗು ಪರಿತ್ಯಕ್ತರು ಭಾಗವಹಿಸಲಿದ್ದಾರೆ.

ಆಸಕ್ತರು ಆರ್.ಟಿ. ನಟರಾಜ್ ಶ್ರೀಕಲಾ ಕೌಶಲ್ಯಾಭಿವೃದ್ಧಿ ಕೇಂದ್ರ, ಒಂದನೆ ಮಹಡಿ, ಜಿಲ್ಲಾ ನಿವೃತ್ತ ನೌಕರರ ಸಂಘದ ಕಟ್ಟಡ, ಪ್ರೆಸ್‌ಕ್ಲಬ್ ಎದುರು, ಆರ್.ಟಿ.ಒ. ಆಫೀಸ್ ರಸ್ತೆ, ಜಿಲ್ಲಾಧಿಕಾರಿಗಳ ಕಚೇರಿ ಆವರಣ, ಶಿವಮೊಗ್ಗ. ಮೊಬೈಲ್: 9448143165/9449552635/9342158359 ಇವರಲ್ಲಿ ಹೆಸರು ನೊಂದಾಯಿಸಿಕೊಳ್ಳಬಹುದಾಗಿದೆ.

# ಶಿಕ್ಷಣ ಕ್ಷೇತ್ರದಲ್ಲಿ ಪ್ರಸ್ತುತ ಕೃತಕ ಬುದ್ಧಿಮತ್ತೆ ಅತ್ಯಂತ ಸಹಕಾರಿ

## ಗಂಡಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಸತ್ಯ ನಾರಾಯಣ

• ಪ್ರಜೋದಯ ವರದಿ

**ಹಾಸನ:** ಶಿಕ್ಷಣ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಹೆಚ್ಚಾಗುತ್ತಿದ್ದು, ಕೇವಲ ತಾಂತ್ರಿಕ ವಿದ್ಯಾರ್ಥಿಗಳಿಗೆ ಅಲ್ಲದೇ ಎಲ್ಲಾ ಶೈಕ್ಷಣಿಕ ಬಳಕೆಗೆ ಕೃತಕ ಬುದ್ಧಿಮತ್ತೆ ಸಹಕಾರಿಯಾಗಿದೆ ಎಂದು ಗಂಡಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಸತ್ಯ ನಾರಾಯಣ ಹೇಳಿದರು.

ನಗರದ ಆರ್.ಸಿ.ರಸ್ತೆ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಂಗ್ಲ ವಿಭಾಗದ ವತಿಯಿಂದ ಬುಧವಾರ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರಸ್ತುತ ಕಾಲಮಾನಕ್ಕೆ ಎ.ಐ. ಬಳಕೆ ಅತ್ಯಂತ ಸೂಕ್ತವಾಗಿದ್ದು, ಪ್ರತಿಯೊಬ್ಬರೂ ಶಿಕ್ಷಕರು, ವಿದ್ಯಾರ್ಥಿಗಳಿಗೂ ಸಹಕಾರಿಯಾಗಿದೆ. ಕೃತಕ ಬುದ್ಧಿಮತ್ತೆಯು ಕಲಿಕೆ ಕೇವಲ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸೀಮಿತ ಎಂದು ಕೊಂಡಿದ್ದೇವೆ, ಆದರೇ ಆ ತಪ್ಪ ಕಲ್ಪನೆಯಿಂದ ಹೊರಬೇಕು ಎಂದು ಹೇಳಿದರು.

ಆಂಗ್ಲ ಭಾಷ ಕಲಿಕೆಯಲ್ಲಿ ಎ.ಐ. ಪಾತ್ರ ದೊಡ್ಡದಿದ್ದು, ಇಂಗ್ಲೀಷ್ ಭಾಷೆ ಕಲಿಯದೆ ಅನೇಕರು ಉದ್ಯೋಗ ವಂಚಿತರಾಗುತ್ತಿದ್ದಾರೆ. ಇದಕ್ಕೆ ಉದಾಹರಣೆ ಎಂಬಂತೆ ಇತ್ತೀಚೆಗೆ ಹಾಸನದಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಕೆಲ ಉದ್ಯೋಗಾಂಕ್ಷಿಗಳು ಆಂಗ್ಲ ಭಾಷೆಯ ಸಂವಹನವಿಲ್ಲದೇ ಉದ್ಯೋಗ ವಂಚಿತರಿದ್ದರು. ಪ್ರಾದೇಶಿಕ ಭಾಷೆಯಲ್ಲಿ ಸಂವಹನ ನಡೆಸಿದರೂ, ಉದ್ಯೋಗಕ್ಕಾಗಿ ಯಾದರೂ ಆಂಗ್ಲ ಭಾಷೆಯನ್ನು ಕಲಿಯಬೇಕಾಗಿದೆ. ವಿದ್ಯಾರ್ಥಿಗಳ ಹಂತದಲ್ಲಿ ದಿನ ನಿತ್ಯ ಆಂಗ್ಲ ಪತ್ರಿಕೆಯನ್ನು ಓದುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ದಿನ ನಿತ್ಯ ನಮಗೆ ಗೊತ್ತಿರುವ ಆಂಗ್ಲ ಪದಗಳನಾದರೂ ಬಳಸುವ ಪ್ರಯತ್ನ ಮಾಡಬೇಕು, ಹಾಗಾದಾಗ ಮಾತ್ರ ಇಂಗ್ಲೀಷ್ ಕಲಿಕೆಗೆ ಸುಲಭವಾಗಲಿದೆ ಎಂದು ಸಲಹೆ ನೀಡಿದರು.




ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಅವರು ಮಾತನಾಡಿ, ಇಂಗ್ಲೀಷ್ ಅಂತರಾಷ್ಟ್ರೀಯ ಭಾಷೆಯಾದರು ಸಹ ಎಲ್ಲಾ ಬಾಷೆಗಳನ್ನು ತನ್ನದೆ ಆದ ಹಿಡಿತದಲ್ಲಿ ಇಟ್ಟುಕೊಂಡಿದೆ. ಇತ್ತೀಚಿನ ದಿನಗಳಲ್ಲಿ ಅಷ್ಟೇ ವೇಗವಾಗಿ ತಂತ್ರಜ್ಞಾನ ಇಂಗ್ಲೀಷ್‌ನಲ್ಲಿ ಅತಿ ಹೆಚ್ಚು ಪ್ರಚಲಿತದಲ್ಲಿದೆ. ಈ ತಂತ್ರಜ್ಞಾನಕ್ಕೆ ಹೊಂದಿಕೊಂಡು ಹೋಗುವ ಅನಿವಾರ್ಯತೆ ಇದೆ, ಇಂಗ್ಲೀಷ್ ಭಾಷೆಯನ್ನು ಗೌರವಿಸುವುದರ ಜೊತೆಗೆ ತಮ್ಮ ಮಾತೃ ಬಾಷೆಯನ್ನು ಸಹ ಪ್ರೀತಿಸುವ ಕೆಲಸ ವನ್ನು ಮಾಡಬೇಕು ಎಂದು ತಿಳಿಸಿದರು.

ಸಂಭಾಷಣೆಯ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಇಂಗ್ಲೀಷ್ ಭಾಷೆಯು ಅವಶ್ಯವಾಗಿದೆ. ಆಧುನಿಕ ತಂತ್ರಜ್ಞಾನ ಬೆಳೆದಂತೆ ಕೃತಕ ಬುದ್ಧಿಮತ್ತೆ ಎಂಬ ಹೊಸ ತಂತ್ರಜ್ಞಾನ ಬೆಳೆದು ಅದರಿಂದ ಆಗುವ ಉಪಯೋಗಗಳು ಮತ್ತು ಇದರಿಂದ ಇಂಗ್ಲೀಷ ಸಂಭಾಷಣೆಯು ಸಹ ಉತ್ತಮವಾಗುತ್ತದೆ ಎಂದು ಅವರು ಹೇಳಿದರು.

ಆಂಗ್ಲ ವಿಭಾಗದ ಮುಖ್ಯಸ್ಥ ಜಿ. ಆರ್.ಮೋಹನ್ ಕುಮಾರ್, ಉಪನ್ಯಾಸಕರಾದ ಕುಶಾಲ್, ರೂಪಶ್ರೀ ಹಾಗೂ ಇತರರು ಹಾಜರಿದ್ದರು.

# ಯುಗಾದಿ- ಶಿವರಾತ್ರಿಯಂದು ನಾನು ಮಾಂಸ ತಿಂತಿನಿ

## ಅದು ನನ್ನಿಷ್ಟ: ಮುಖ್ಯಮಂತ್ರಿ ಸಿದ್ದರಾಮಯ್ಯ

• ಪ್ರಜೋದಯ ವರದಿ

**ಬೆಂಗಳೂರು:** ಧಾರ್ಮಿಕ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ಮುಕ್ತವಾಗಿ ಹಾಗೂ ಸುದೀರ್ಘವಾಗಿ ಮಾತನಾಡಿದ್ದಾರೆ. ಮಾಂಸಾಹಾರ ಸೇವೆ, ಹಿಂದೂ ಧರ್ಮದ ಆಚರಣೆ, ಯಾವುದೇ ಸಮುದಾಯವಿದ್ದರೂ ಎಲ್ಲ ಸಮುದಾಯದವರೂ ಒಂದೇ ಹಾಗೂ ನಾನು ಯುಗಾದಿ ಹಾಗೂ ಶಿವರಾತ್ರಿಯ ಸಂದರ್ಭದಲ್ಲೂ ಮಾಂಸಾಹಾರ ಸೇವನೆ ಮಾಡಿದ್ದೇನೆ ಎಂದು ಅವರು ಹೇಳಿದ್ದಾರೆ.

ವಿಧಾನಸಭೆಯಲ್ಲಿ ಅವರು ಯಾವೆಲ್ಲ ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಹಬ್ಬದ ಸಂದರ್ಭಗಳಲ್ಲಿ ಮಾಂಸಾಹಾರ ಸೇವನೆ ಮಾಡಿರುವ ಬಗ್ಗೆ ಹಾಗೂ ಅವರ ಧಾರ್ಮಿಕ ನಂಬಿಕೆಯ ಬಗ್ಗೆ ಅವರು ಮಾತನಾಡಿದ್ದೇನು ಎನ್ನುವುದು ಇಲ್ಲಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಧಾರ್ಮಿಕ ಆಚರಣೆ, ನಂಬಿಕೆ ಹಾಗೂ ಸಿದ್ಧಾಂತ ಸೇರಿದಂತೆ ವಿವಿಧ ವಿಚಾರಗಳ ಬಗ್ಗೆ ಮುಕ್ತವಾಗಿ ವಿಧಾನಸಭೆ ಅಧಿವೇಶನದಲ್ಲಿ ಮಾತನಾಡಿದ್ದಾರೆ.

ಮೊದಲಿನಿಂದಲೂ ಕೆಲವರು ಸಿದ್ದರಾಮಯ್ಯ ಅವರ ಆಹಾರ ಸೇವನೆ ಹಾಗೂ ಅವರ ಧಾರ್ಮಿಕ ವಿಚಾರದ ಬಗ್ಗೆ ಹೆಚ್ಚು ಟೀಕೆ ಮತ್ತು ಚರ್ಚೆ ಮಾಡುತ್ತಿದ್ದರು. ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಈ ವಿಚಾರಗಳ ಬಗ್ಗೆ ಸ್ಪಷ್ಟಪಡಿಸಿದ್ದಾರೆ.

2026 - 2027ನೇ ಸಾಲಿನ ಕರ್ನಾಟಕ ಬಜೆಟ್ ಅನ್ನು ರಾಹುಕಾಲ ನೋಡಿಕೊಂಡು ಮಂಡಿಸಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಪ್ರಸ್ತಾಪಿಸಿದ್ದರು. ಈ ವಿಷ 'ಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಕ್ತವಾಗಿ ಉತ್ತರ ನೀಡಿದ್ದಾರೆ. ನಿಜ ರಾಹುಕಾಲ ನೋಡಿಕೊಂಡು ಬಜೆಟ್ ಮಂಡನೆ ಮಾಡಿದ್ದೇವೆ. ನಿಮ್ಮಂತವರ ಮಾತನ್ನೂ ಕೇಳಬೇಕಲ್ಲವೇ, ಹಿಂದೆಲ್ಲವೂ ನಾನು ರಾಹುಕಾಲದಲ್ಲೂ ಬಜೆಟ್ ಮಂಡನೆ ಮಾಡಿದ್ದೇನೆ. ಈ ಬಾರಿ ಕೆಲವರು ಅಧಿಕಾರಿಗಳು ಹಾಗೂ ಮನೆಯವರು ರಾಹುಕಾಲದಲ್ಲಿ ಬಜೆಟ್ ಮಂಡನೆ ಮಾಡಬೇಡಿ ಎಂದು ಮನವಿ ಮಾಡಿದ್ದರು. ನಾನು ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯಗಳಿಗೆ ಬೆಲೆ ಕೊಡಬೇಕು ಎಂದು ಹೇಳಿದ್ದಾರೆ.

# ಚೆನ್ನಿಗನ ವಿಜೃಂಭಣೆಯ ಕಲ್ಯಾಣೋತ್ಸವ

• ಪ್ರಜೋದಯ ವರದಿ

**ಬೇಲೂರು:** ಲೋಕ ಕಲ್ಯಾಣಕ್ಕಾಗಿ ಜಗತ್ಪ್ರಸಿದ್ಧ ಬೇಲೂರು ಚನ್ನಕೇಶವ ದೇವರಿಗೆ ವಿವಾಹ ನೆರವೇರಿಸಲಾಗಿದೆ. ರಥೋತ್ಸವದ ಅಂಗವಾಗಿ ಚೆಲುವ ಚನ್ನಿಗನೆಂದೇ ಪ್ರಖ್ಯಾತಿಯಾದ ಚನ್ನಕೇಶವನಿಗೆ ರಾತ್ರಿ ಸಂಪ್ರದಾಯಬದ್ಧವಾಗಿ ಕಲ್ಯಾಣೋತ್ಸವವನ್ನು ಸಡಗರ ಸಂಭ್ರಮದಿಂದ ನೆರವೇರಿಸಲಾಯಿತು.

ರಥೋತ್ಸವ, ಹರಕೆ ಹಾಗೂ ವಿಶೇಷ ಸಂದರ್ಭಗಳಲ್ಲಿ ದೇವತಾ ಕಲ್ಯಾಣೋತ್ಸವ ಮಾಡಲಾಗುತ್ತದೆ. ಮನುಷ್ಯರಿಗೆ ಮಾಡುವ ಮದುವೆಯಲ್ಲಿ ಮಾಂಗಲ್ಯ ತಂತುನಾನೇನಾ ಮಮಜೀವನ ಹೇತುನಾ ಎಂದರೆ ಈ ಮಾಂಗಲ್ಯದಿಂದ ಎಲ್ಲ ಜೀವನಕ್ಕೆ ಒಳಿತಾಗಲಿ ಎಂಬ ಮಂತ್ರವಿದ್ದರೆ, ದೇವತಾ ಕಲ್ಯಾಣದಲ್ಲಿ ಮಾಂಗಲ್ಯ ತಂತುನಾನೇನಾ ಜಗಜೀವನ ಹೇತುನಾ ಎಂಬುದಾಗಿ ಮಂತ್ರ ಹೇಳಲಾಗುತ್ತದೆ.

ಇದೇ ಸಂಪ್ರದಾಯದಂತೆ ಬೇಲೂರಿನ ಜಗದ್ವಿಖ್ಯಾತ ಚನ್ನಕೇಶವಸ್ವಾಮಿ ದೇವಾಲಯದಲ್ಲಿ ಚನ್ನಕೇಶವನ ಪತ್ನಿಯರಾದ ಶ್ರೀದೇವಿ (ಸೌಮ್ಯನಾಯಕಿ) ಮತ್ತು ಭೂದೇವಿ (ರಂಗನಾಯಕಿ) ಅವರೊಂದಿಗೆ ಸಾಂಪ್ರದಾಯಿಕವಾಗಿ ವಿವಾಹವನ್ನು ನೆರವೇರಿಸಲಾಗುತ್ತದೆ.



ಹೀಗೆ ಸರ್ವ ಸಂಪ್ರದಾಯಗಳಿಂದ ವಿವಾಹ ನೆರವೇರಿಸಿ ಉತ್ಸವ ಮೂರ್ತಿಗಳನ್ನು ವಧು -ವರರಂತೆ ಪ್ರಾಕಾರ ಮೆರವಣಿಗೆ ಮಾಡಿ ಗರ್ಭಗೃಹಕ್ಕೆ ಸೇರಿಸಲಾಗುತ್ತದೆ. ಈ ಎಲ್ಲಾ ಕಾರ್ಯಗಳಿಗೆ ಪೂರ್ವಭಾವಿಯಾಗಿ ಸುಹಾಸಿನಿಯರಿಂದ ಹರಿಷಿಣ ಕುಟ್ಟುವುದು, ಗೋಧಿ ಕಲ್ಲು ಶಾಸ್ತ್ರಗಳು ನಡೆದಿರುತ್ತವೆ. ಹಾಗೂ ವಿವಾಹದ 3ನೆಯ ದಿನ ವಿವಾಹ ಸಂಬಂಧಿ ನಾಗೋಲಿ ಹೋಮ ಸಮೇತವಾಗಿ ನಡೆಯುತ್ತದೆ. ಭಕ್ತರು ಮದುವೆಗಳಂತೆ ಉತ್ಸಾಹ, ಸಂಭ್ರಮದಿಂದ ಕಲ್ಯಾಣೋತ್ಸವದಲ್ಲಿ ಭಾಗವಹಿಸಿ ಪುನೀತರಾದರು. ಹೀಗೆ ಕಲ್ಯಾಣೋತ್ಸವ ಸಾಂಪ್ರದಾಯಿಕವಾಗಿ ಸಡಗರ ಸಂಭ್ರಮದಿಂದ ನಡೆಯಿತು.

ದೇವಾಲಯದ ಪ್ರಧಾನ ಆಗಮಿಕರಾದ ಶ್ರೀನಿವಾಸ ಭಟ್ಟರ್ ಮತ್ತು ನರಸಿಂಹ ಭಟ್ಟರು ವಿವಾಹ ವಿಧಿಗಳನ್ನು ನೆರವೇರಿಸಿದರು.

# ಯುದ್ಧದ ಉದ್ವಿಗ್ನತೆ ನಿಯಂತ್ರಿಸಲು ಭಾರತದಿಂದ ಸಾಧ್ಯ: ಇರಾನ್

• ಪ್ರಜೋದಯ ವರದಿ

**ನವದೆಹಲಿ:** ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಯುದ್ಧದ ಮಧ್ಯೆ ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ ನವದೆಹಲಿ ವಿಶ್ವಾಸಾರ್ಹ ಪಾತ್ರ ವಹಿಸಬಹುದು ಎಂದು ಟೆಹ್ರಾನ್ ನಂಬುತ್ತದೆ ಎಂದು ಭಾರತದಲ್ಲಿನ ಇರಾನ್ ರಾಯಭಾರಿ ಮೊಹಮ್ಮದ್ ಫತಾಲಿ ತಿಳಿಸಿದ್ದಾರೆ.

ಸದ್ಯ ಯುದ್ಧದಲ್ಲಿ ತೊಡಗಿರುವ ಅಮೆರಿಕ ಮತ್ತು ಇಸ್ರೇಲ್ ಮತ್ತು ಇರಾನ್‌ಗಳೊಂದಿಗೆ ಐತಿಹಾಸಿಕ ಮತ್ತು ಕಾರ್ಯತಂತ್ರದ ಸಂಬಂಧ ಗಳನ್ನು ನಿರ್ವಹಿಸಲು ಮತ್ತು ಉದ್ವಿಗ್ನತೆ ಕಡಿಮೆ ಮಾಡುವಲ್ಲಿ ಭಾರತವು 'ಪರಿಣಾಮಕಾರಿ ಮತ್ತು ಸಕಾರಾತ್ಮಕ' ಪಾತ್ರವನ್ನು ವಹಿಸಬಹುದು ಎಂದು ಅವರು ಹೇಳಿದ್ದಾರೆ.



ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಮೇಲಿನ ದಾಳಿಗೆ ತಾತ್ಕಾಲಿಕ ವಿರಾಮ ಘೋಷಿಸಿ, ಮಾತುಕತೆಗೆ ಟೆಹ್ರಾನ್‌ಗೆ ಕರೆ ನೀಡಿದ ನಂತರ ಇರಾನ್ ರಾಯಭಾರಿ ಈ ಹೇಳಿಕೆ ನೀಡಿದ್ದಾರೆ.

ಭಾರತವು ಸದ್ಯದ ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ ಖಂಡಿತವಾಗಿಯೂ ಪರಿಣಾಮಕಾರಿ ಮತ್ತು ಸಕಾರಾತ್ಮಕ ಪಾತ್ರವನ್ನು ವಹಿಸಬಹುದು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ (ಗ್ಲೋಬಲ್ ಸೌತ್) ತನ್ನ ಬಲವಾದ ಸ್ಥಾನ ಮತ್ತು ಸಮತೋಲಿತ, ತಟಸ್ಥ ವಿದೇಶಾಂಗ ನೀತಿಯಿಂದಾಗಿ, ಭಾರತವು ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಬಹುದು.

ಇದು ಉದ್ವಿಗ್ನತೆಯನ್ನು ಕಡಿಮೆ ಮಾಡಲು, ಶಾಂತಿಯುತ ಚರ್ಚೆಗಳನ್ನು ಪ್ರೋತ್ಸಾಹಿಸಲು ಮತ್ತು ಎದುರಾಳಿ ದೇಶಗಳ ನಡುವೆ ಸಂವಾದವನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ' ಎಂದು ಅವರು ನವದೆಹಲಿಯಲ್ಲಿ ಹೇಳಿದರು.

ಭಾರತವು ಎಲ್ಲ ದೇಶಗಳೊಂದಿಗೆ ದೀರ್ಘಕಾಲೀನ ಮತ್ತು ಪ್ರಮುಖ ಕಾರ್ಯತಂತ್ರದ ಸಂಬಂಧಗಳನ್ನು ಹೊಂದಿದೆ. ಈ ಸಮತೋಲಿತ ಸಂಬಂಧಗಳಿಂದಾಗಿ, ಭಾರತವನ್ನು ತಟಸ್ಥ ಮತ್ತು ವಿಶ್ವಾಸಾರ್ಹ ದೇಶವೆಂದು ಪರಿಗಣಿಸಲಾಗುತ್ತದೆ. ಅದು ಅವುಗಳ ನಡುವಿನ ತಪ್ಪು ತಿಳುವಳಿಕೆಯನ್ನು ನಿವಾರಿಸಲು ಮತ್ತು ರಾಜತಾಂತ್ರಿಕ ಮಾರ್ಗಗಳನ್ನು ಬಲಪಡಿಸುವಲ್ಲಿ ಸಹಾಯ ಮಾಡುತ್ತದೆ' ಎಂದರು.

**ರಾಜತಾಂತ್ರಿಕತೆಗೆ ಅಮೆರಿಕ ಒತ್ತಾಯ**

ಅಮೆರಿಕವು ರಾಜತಾಂತ್ರಿಕತೆ ಮತ್ತು ಮಿಲಿಟರಿ ಸಿದ್ಧತೆ ಎರಡನ್ನೂ ಏಕಕಾಲದಲ್ಲಿ ಮಾಡುತ್ತಿದೆ. ಯುದ್ಧ ವಿರಾಮ ಘೋಷಿಸಲು ಮತ್ತು ಸಂಘರ್ಷವನ್ನು ಕಡಿಮೆ ಮಾಡಲು ಅಮೆರಿಕ ಇರಾನ್‌ಗೆ 15 ಅಂಶಗಳ ಪ್ರಸ್ತಾವನೆಯನ್ನು ಕಳುಹಿಸಿದೆ ಎಂದು ಅಸೋಸಿಯೇಟೆಡ್ ಪ್ರೆಸ್ ವರದಿಯೊಂದು ತಿಳಿಸಿದೆ. ಅದೇ ಸಮಯದಲ್ಲಿ, ಪರಿಸ್ಥಿತಿ ಹದಗೆಟ್ಟರೆ ತನ್ನ ಮಿಲಿಟರಿ ಉಪಸ್ಥಿತಿಯನ್ನು ಬಲಪಡಿಸಲು ಪ್ಯಾರಾಟ್ರೂಪರ್‌ಗಳು ಮತ್ತು ಮೆರೈನ್‌ಗಳು ಸೇರಿದಂತೆ ಪಡೆಗಳನ್ನು ಗಲ್ಫ್ ಪ್ರದೇಶಕ್ಕೆ ನಿಯೋಜಿಸುತ್ತಿದೆ.

ಈ ಮಧ್ಯೆ, ಇರಾನ್‌ನ ಸೇನೆಯು ರಾಜತಾಂತ್ರಿಕ ಪ್ರಯತ್ನವನ್ನು ಅಪಹಾಸ್ಯ ಮಾಡಿದೆ ಮತ್ತು ಇಸ್ರೇಲ್ ಮತ್ತು ಕೊಲ್ಲಿ ಪ್ರದೇಶದ ಮೇಲೆ ಹೆಚ್ಚಿನ ದಾಳಿಗಳನ್ನು ಪ್ರಾರಂಭಿಸಿದೆ. ಇದರಲ್ಲಿ ಕುವೈತ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲಿನ ದಾಳಿಯೂ ಸೇರಿದೆ.

ಸಾಮಾನ್ಯ ಮಿಲಿಟರಿ ಮತ್ತು ಅರೆಸೈನಿಕ ಕ್ರಾಂತಿಕಾರಿ ಗಾರ್ಡ್ ಎರಡನ್ನೂ ನಿಯಂತ್ರಿಸುವ ಇರಾನ್‌ನ ಖತಮ್ ಅಲ್-ಅನ್ಬಿಯಾ ಕೇಂದ್ರ ಪ್ರಧಾನ ಕಚೇರಿಯು, ಈ ಹೇಳಿಕೆಯನ್ನು ತಿರಸ್ಕರಿಸಿದ್ದು, ಅಮೆರಿಕದೊಂದಿಗೆ ಯಾವುದೇ ಮಾತುಕತೆ ಇಲ್ಲ ಎಂದು ಸೂಚಿಸಿದೆ.

## ಸಂವಾದದಿಂದ ಕೃಷಿರಂಗದ ಅಂತರಂಗ ಅರಿಯಲು ಸಾಧ್ಯ: ಕೃಷಿ ಮಂಥನ್ ಹ್ಯಾಕಥಾನ್‌ನಲ್ಲಿ ವಿ.ಮಧುಸೂದನ್

# ತಂತ್ರಜ್ಞಾನ-ಕೃಷಿ ಮಿಳಿತಗೊಂಡರೆ ಅಭಿವೃದ್ಧಿ ಸಾಧ್ಯ

• ಪ್ರಜೋದಯ ವರದಿ

**ಅರಕಲಗೂಡು:** ತಂತ್ರಜ್ಞಾನದೊಂದಿಗೆ ಕೃಷಿ ಹಾಗೂ ಕೃಷಿಕರು ಮಿಳಿತಗೊಂಡರೆ ಕೃಷಿಯಲ್ಲಿ ಅಪರಿಮಿತವಾದ ಬೆಳವಣಿಗೆ ಕಂಡುಕೊಳ್ಳಬಹುದು ಎಂದು ಆಕಾಶವಾಣಿಯ ಕೃಷಿ ರಂಗದ ವಿಭಾಗದ ಮುಖ್ಯಸ್ಥ ಅರಕಲಗೂಡು ವಿ.ಮಧುಸೂಧನ್ ಅವರು ತಿಳಿಸಿದರು.

ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಮೀರೈಸ್ ಫೌಂಡೇಶನ್ ಹಾಗೂ ಹಾಸನ ಆಕಾಶವಾಣಿ ಕೇಂದ್ರದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಕೃಷಿ ಮಂಥನ್ ಹ್ಯಾಕಥಾನ್ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದ ಅವರು, ಕೃಷಿಯೊಂದಿಗೆ ತಂತ್ರಜ್ಞಾನ ಬೆರೆಯದ ಕಾರಣದಿಂದಾಗಿ ನಾವು ಇದುವರೆಗೆ ನಿರೀಕ್ಷಿತ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಲಿಲ್ಲ. ತಂತ್ರಜ್ಞಾನ ಕೃಷಿಕನ ಹೊಲ-ಗದ್ದೆಗಳನ್ನು ನೈಜ್ಯವಾಗಿ ಪ್ರವೇಶಿಸಿದರೆ ಯಾರೂ ನಿರೀಕ್ಷಿಸದ ಸಾಧನೆಯನ್ನು ಕೃಷಿ ರಂಗದಲ್ಲಿ ಮಾಡಬಹುದು. ತಾಂತ್ರಿಕ ಸಂಸ್ಥೆಗಳು ಕೃಷಿಕರೊಂದಿಗೆ ಸಂವಾದ ನಡೆಸುವ ಮೂಲಕ ಕೃಷಿರಂಗದ ಅಂತರಂಗವನ್ನು ಅರಿಯಲು ಸಾಧ್ಯವಾಗುತ್ತದೆ. ಈ ಮೂಲಕ ಕೃಷಿಯ ಅನೇಕ ಸಮಸ್ಯೆಗಳಿಗೆ ಅತ್ಯುತ್ತಮವಾದ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಬೆಂಗಳೂರಿನ ಎಐ ತಂತ್ರಜ್ಞ ಎಂ.ಜಿ ಕಿರಣ್ ಅವರು ಮಾತನಾಡಿ, ತಂತ್ರಜ್ಞಾನ ಅಭಿವೃದ್ಧಿ ಹೊಂದಿದಂತೆಲ್ಲ ಅದನ್ನು ಸಮರ್ಪಕವಾಗಿ ಬಳಕೆ ಮಾಡುವುದು ಕೂಡ ದೊಡ್ಡ ಸವಾಲಾಗಿದೆ. ಕೃಷಿಕರಿಗೆ ಈ ಸವಾಲು ಅತ್ಯಂತ ಕ್ಲಿಷ್ಟಕರವಾಗಿರುತ್ತದೆ ಯಾವುದೇ ತಂತ್ರಜ್ಞಾನವನ್ನು ತಮ್ಮ ಜಮೀನಿನಲ್ಲಿ ಅಳವಡಿಕೆ ಮಾಡುವ ಸಂದರ್ಭದಲ್ಲಿ ಅತ್ಯಂತ ಎಚ್ಚರಿಕೆಯಿಂದ ಅಳವಡಿಕೆ ಮಾಡಿಕೊಳ್ಳಬೇಕು ಎಂದು ಅವರು ಕೃಷಿಕರಿಗೆ ಸಲಹೆ ನೀಡಿದರು.

ಮಲೆನಾಡು ತಾಂತ್ರಿಕ ಸಮಿತಿಯ ಅಧ್ಯಕ್ಷ ಆರ್. ಟಿ.ದೇವೇಗೌಡ ಅವರು ಮಾತನಾಡಿ, ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ



ಕೃಷಿಕರ ಸಮಸ್ಯೆಗಳಿಗೆ ಸ್ಪಂದಿಸಲು ಮುಂದಾಗಿರುವುದು ಅತ್ಯುತ್ತಮವಾದ ಬೆಳವಣಿಗೆಯಾಗಿದ್ದು ಮುಂದಿನ ದಿವಸಗಳಲ್ಲಿಯೂ ಈ ಕುರಿತು ಗಂಭೀರವಾದ ಪ್ರಯತ್ನಗಳನ್ನು ಮಾಡಲಾಗುತ್ತದೆ ಎಂದು ಅವರು ಹೇಳಿದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಮೀತಿಯ ಪ್ರಧಾನ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್ ಅವರು ಮಾತನಾಡಿ, ಕೃಷಿ ನಮಗೆ ಸಮರ್ಪಕವಾದ ಅನ್ನ ಆಹಾರಗಳನ್ನು ನೀಡುತ್ತಿದ್ದು ಕೃಷಿಕ ಮಾತ್ರ ಬಸವಳಿದಿರುವುದು ಅತ್ಯಂತ ಶೋಚನೀಯ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ಕೃಷಿಕರನ್ನು ಕೈಹಿಡಿದು ನಡೆಸುವಂತಹ ತಂತ್ರಜ್ಞಾನಗಳನ್ನು ಆಧುನಿಕ ತಂತ್ರಜ್ಞರು ಸಂಶೋಧಿಸಿ ನೆರವಾಗಬೇಕು ಎಂದು ಕರೆ ನೀಡಿದರಲ್ಲದೆ, ಜೊತೆಗೆ ಸರ್ಕಾರ ಕೃಷಿ ಉತ್ಪನ್ನಗಳಿಗೆ ಉತ್ತಮವಾದ ಮಾರುಕಟ್ಟೆಯನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಚಿಂತಿಸಬೇಕಿದೆ ಎಂದು ಹೇಳಿದರು.

ಮೀರೈಸ್ ಫೌಂಡೇಶನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಗೀತಾ ಕಿರಣ್ ಮತ್ತು ಮಲೆನಾಡು ಇಂಜಿನಿಯರ್ ಕಾಲೇಜು ಪ್ರಾಂಶುಪಾಲರಾದ ಡಾ.ಹೆಚ್.ಜೆ. ಅಮರೇಂದ್ರ, ಮಾತಾನಾಡಿ, ನಮ್ಮ ಕಾಲೇಜು ರೈತರ ಸಹಕಾರ ದಿಂದ ಪ್ರಾರಂಭವಾಯಿತು ರೈತರ ನೇರವಿನ ಕೆಲಸ ಮಾಡುವುದು ನಮ್ಮ ಕರ್ತವ್ಯ ಇದೆ. ಡ್ರೋನ್‌ನಿಂದ ಹಲವಾರು ಪ್ರಯೋಜನವನ್ನು ತಂತ್ರಜ್ಞಾನ ಹೊಂದಿದ ಇಂಜಿನಿಯರ್ ವಿದ್ಯಾರ್ಥಿಗಳಿಂದ ತಿಳಿವಳಿಕೆ ಹಾಗೂ ಬಳಕೆ ವಿಧಾನವನ್ನು ಈ ಎರಡು ದಿನ ತಿಳಿಸುವ ಕಾರ್ಯಕ್ರಮ ನಡೆದಿದೆ ಎಂದರು.

ಜಿಲ್ಲೆಯ ವಿವಿಧ ಭಾಗಗಳ 60ಕ್ಕೂ ಅಧಿಕ ಸಂಖ್ಯೆಯ ಆಯ್ದ ಕೃಷಿಕರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಮಲೆನಾಡು ತಾಂತ್ರಿಕ ಸಮಿತಿಯ ಖಜಾಂಚಿ ಹೆಚ್.ಡಿ.ಪಾರ್ಶ್ವನಾಥ್, ಕೆ.ಎಂ.ರಾಜೇಗೌಡ, ಬೇಸಾಯ ಶಾಸ್ತ್ರಜ್ಞ ಡಾ. ರಾಜಶೇಖರ್ ಹಾಗೂ ಮತ್ತಿತರರು ಭಾಗವಹಿಸಿದ್ದರು.

## ಅಗ್ನಿ ಬನ್ನಿರಾಯಸ್ವಾಮಿ ಜಯಂತಿ ಮಾ.28 ರಂದು

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಮಾ.28 ರಂದು ಹಾಸನಾಂಬ ಕಲಾಕ್ಷೇತ್ರದಲ್ಲಿ ಬೆಳಿಗ್ಗೆ 11 ಗಂಟೆಗೆ ಅಗ್ನಿ ಬನ್ನಿರಾಯಸ್ವಾಮಿ ಜಯಂತಿ ಆಯೋಜಿಸಲಾಗಿದೆ.

ಮಾಜಿ ಪ್ರಧಾನ ಮಂತ್ರಿ ಹಾಗೂ ರಾಜ್ಯಸಭಾ ಸದಸ್ಯ ಹೆಚ್.ಡಿ. ದೇವೇಗೌಡ ಅವರು ಘನ ಉಪಸ್ಥಿತರಿರಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ, ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರು ಹಾಗೂ ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತರಿರಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರಾದ



ಹೆಚ್.ಡಿ. ರೇವಣ್ಣ, ಸಿ.ಎನ್. ಬಾಲಕೃಷ್ಣ, ಎ.ಮಂಜು, ಹೆಚ್.ಕೆ ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರಾದ ಸೂರಜ್ ರೇವಣ್ಣ, ಮಧು ಜಿ, ಮಾದೇಗೌಡ, ಕೆ.ವಿವೇಕಾನಂದ ಅವರು ಭಾಗವಹಿಸಲಿದ್ದಾರೆ.

ಬೇಲೂರು ಕ.ಸಾ.ಪ. ಅಧ್ಯಕ್ಷ ಮಂಜೇಗೌಡ ಅವರು ಉಪನ್ಯಾಸ ನೀಡಲಿದ್ದಾರೆ.

# ಆತ್ಮಸ್ಥೈರ್ಯದಿಂದ ಸಮಸ್ಯೆ ಎದುರಿಸುವ ಜಾಣ್ಮೆ ಕರಗತ

## ಮಹಾನಗರ ಪಾಲಿಕೆ ಇಂಜಿನೀಯರ್ ಕವಿತಾ | ಸರ್ಕಾರಿ ಕಾಲೇಜಿನಲ್ಲಿ ಗ್ರಾಮೀಣ ಕಲರವ

• ಪ್ರಜೋದಯ ವರದಿ



**ಹಾಸನ:** ಆತ್ಮಸ್ಥೈರ್ಯ ಬೆಳೆಸಿಕೊಳ್ಳುವ ಮೂಲಕ ವಿದ್ಯಾರ್ಥಿಗಳು ಜೀವನದಲ್ಲಿ ಎದುರಾಗುವ ಕಠಿಣ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದು ಮಹಾನಗರ ಪಾಲಿಕೆ ಇಂಜಿನೀಯರ್ ಕೆ.ಆರ್.ಕವಿತಾ ಅವರು ಸಲಹೆ ನೀಡಿದರು.

ನಗರದ ಎಂ.ಜಿ. ರಸ್ತೆಯಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಣತಿ ಮಹಿಳಾ ವೇದಿಕೆ, ಹೇಮಾವತಿ ರೇಂಜರ್ಸ್ ಘಟಕ ಮತ್ತು ಐಕ್ಯೂಎಸಿ ಹಾಗು ಸಾಂಸ್ಕೃತಿಕ ವೇದಿಕೆಯಿಂದ ಬುಧವಾರ ಅಂತರ್‍ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಗ್ರಾಮೀಣ ಕಲರವ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ಬೇರೆಯವರ ಬಗ್ಗೆ ಟೀಕೆ ಟಿಪ್ಪಣಿ ಮಾಡುವ ಮೊದಲು ನಾವು ಸರಿ ಇದ್ದೇವೆಯೇ ಎಂಬ ಪರಾಮರ್ಶೆ ಮಾಡಿಕೊಳ್ಳಬೇಕು. ಸದ್ವಿಚಾರ ಅಳವಡಿಸಿಕೊಂಡ ವ್ಯಕ್ತಿ ಯಾವತ್ತೂ ತಪ್ಪು ಮಾಡುವುದಿಲ್ಲ. ಆದ್ದರಿಂದ ಒಳ್ಳೆಯವರ ಸಹವಾಸ, ಸಾಹಿತ್ಯ ಓದುವಿಕೆ ಹಾಗು ಸಕಾರಾತ್ಮಕ ಚಿಂತನೆ ಮೈಗೂಡಿಸಿಕೊಳ್ಳಬೇಕೆಂದರು.

ಶ್ರೀಮಂತಿಕೆ, ಆಡಂಬರದ ಜೀವನಕ್ಕೆ ಮಾರು ಹೋಗದೆ ಸರಳ ಜೀವನ ಶೈಲಿ ಮೂಲಕ ಸಮಾಜಮುಖಿಯಾಗಬೇಕು. ಉತ್ತಮ ವ್ಯಕ್ತಿತ್ವ ಹೊಂದಿರುವಂತಹ ವ್ಯಕ್ತಿಗಳನ್ನು ಆದರ್ಶವಾಗಿ ಇಟ್ಟುಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಕೆ.ಜಿ.ಕವಿತ ಅವರು ಮಾತನಾಡಿ, ಇತ್ತೀಚೆಗೆ ಹೆಣ್ಣು ಮಕ್ಕಳ ಮೇಲೆ ಸಾಮೂಹಿಕ ಅತ್ಯಾಚಾರ, ಲೈಂಗಿಕ ಕಿರುಕುಳದಂತಹ ಪ್ರಕರಣಗಳು ಹೆಚ್ಚಾಗುತ್ತಿದ್ದು, ಹೆಣ್ಣು ಮಕ್ಕಳಿಗೆ ಸುರಕ್ಷತೆ ಇಲ್ಲದಂತಾಗಿದೆ. ಆದ್ದರಿಂದ ವಿದ್ಯಾರ್ಥಿನಿಯರು ಸ್ವಯಂ ರಕ್ಷಣಾ ಕ್ರಮಗಳನ್ನು ಕಲಿಯಬೇಕು. ಆತ್ಮಸ್ಥೈರ್ಯ ಹಾಗು ಪ್ರಶ್ನಿಸುವ ಗುಣ ಬೆಳೆಸಿಕೊಂಡರೆ ಸಂಭಾವ್ಯ ಅಪಾಯಗಳಿಂದ ದೂರಾಗಬಹುದೆಂದರು.

ಇತ್ತೀಚೆಗೆ ಯುವಕರು ಮೊಬೈಲ್ ವ್ಯಾಮೋಹಕ್ಕೆ ಒಳಗಾಗಿದ್ದಾರೆ. ಕ್ರೀಡಾಕೂಟಗಳಲ್ಲಿ ಭಾಗವಹಿಸುವುದರಿಂದ ಮಾನಸಿಕ ಹಾಗು ದೈಹಿಕ ದೃಢತೆ ಉಂಟಾಗುತ್ತದೆ. ಆಧುನಿಕತೆ ಬೆಳೆದಂತೆ ಬದುಕಿನಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಆದರೆ ಸಾಧಕ-ಬಾಧಕ ಅರಿತು ಮುನ್ನಡೆಯಬೇಕೆಂದರು.

ಪ್ರಣತಿ ಮಹಿಳಾ ವೇದಿಕೆ ಸಂಚಾಲಕಿ ಡಾ. ಎಂ.ಜೆ.ಶ್ರೀದೇವಿ, ಹೇಮಾವತಿ ರೇಂಜರ್ಸ್ ಘಟಕದ ಸಂಚಾಲಕಿ ಜಿ.ಎಂ.ಲತಾ, ಸಾಂಸ್ಕೃತಿಕ ವೇದಿಕೆ ಸಂಚಾಲಕ ವಿ.ಪುರುಷೋತ್ತಮ್, ಕಾಲೇಜಿನ ಎಲ್ಲಾ ವಿಭಾಗದ ಪ್ರಾಧ್ಯಾಪಕರು, ಬೋಧಕೇತರ ವರ್ಗ ಹಾಗು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



### ಗಮನ ಸೆಳೆದ ಕ್ರೀಡಾಕೂಟ

ಕಾಲೇಜಿನಲ್ಲಿ ಆಯೋಜಿಸಿದ್ದ ಗ್ರಾಮೀಣ ಕಲರವ ಕ್ರೀಡಾಕೂಟದಲ್ಲಿ ವಿದ್ಯಾರ್ಥಿನಿಯರು ಭಾಗವಹಿಸಿ ಗಮನ ಸೆಳೆದರು. ನೀರು ಹೊರುವ, ಮಡಿಕೆ ಒಡೆಯುವ, ಗೋಣಿ ಚೀಲದ ಓಟ, ಮೂರು ಕಾಲು ಓಟ, ಹಗ್ಗ-ಜಗ್ಗಾಟ, ರಂಗೋಲಿ ಸ್ಪರ್ಧೆ, ಹಾಡುಗಾರಿಕೆ ಸ್ಪರ್ಧೆ ನಡೆಸಲಾಯಿತು.

ವಿದ್ಯಾರ್ಥಿನಿಯರು ತಲೆ ಮತ್ತು ಸೊಂಟದ ಮೇಲೆ ನೀರು ತುಂಬಿದ ಕೊಡ ಹೊತ್ತು ಸರಾಗವಾಗಿ ಓಡುತ್ತಿದ್ದರೆ ಇತ್ತ ಸಹಪಾಠಿಗಳು ಶಿಳ್ಳೆ ಮತ್ತು ಚಪ್ಪಾಳೆ ಹೊಡುವ ಮೂಲಕ ಪ್ರೋತ್ಸಾಹಿಸಿದರು. ಮೂರು ಕಾಲಿನ ಓಟ ನೋಡುಗರ ಮೈ ಜುಮ್ಮೆನ್ನುವಂತಿತು. ಹಾಗೆಯೇ ಗೋಣಿ ಚೀಲದ ಓಟದಲ್ಲಿ ವಿದ್ಯಾರ್ಥಿನಿಯರು ಕಪ್ಪೆಗಳಂತೆ ಕುಪ್ಪಳಿಸಿ ಸಂತಸ ಪಟ್ಟರು.

ಇನ್ನು ಹಗ್ಗ-ಜಗ್ಗಾಟದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿಯರ ತಂಡಗಳು ತಮ್ಮ ಬಲಾಬಲ ಪ್ರದರ್ಶಿಸುವ ಮೂಲಕ ಕ್ರೀಡಾಕೂಟಕ್ಕೆ ಶಕ್ತಿ ತುಂಬಿದರು. ಬಾಲ್ಯದ ಆಟವನ್ನು ಆಡಲು ವಿದ್ಯಾರ್ಥಿಗಳು ಸಾಲುಗಟ್ಟಿ ನಿಂತಿದ್ದರು.

ಕ್ಯಾಂಟೀನ್ ಡೇನಲ್ಲಿ ವಿದ್ಯಾರ್ಥಿಗಳು ಬಿರಿಯಾನಿ, ಮಸಾಲೆ ಮಜ್ಜಿಗೆ, ಮೊಳಕೆ ಕಾಳು, ಚುರುಮುರಿ, ಪಾನಿಪುರಿ, ಬಗೆಬಗೆಯ ಹಣ್ಣುಗಳನ್ನು ಸಿದ್ಧಪಡಿಸಿ ವ್ಯವಹಾರ ಕೌಶಲ ಮೆರೆದರು.

# ಲೇಖಕಿ ರೂಪ ಹಾಸನಗೆ ಸಾಹಿತ್ಯಶ್ರೀ ಪ್ರಶಸ್ತಿ

» ಮೊದಲನೇ ಪುಟದಿಂದ

ಕೊಂಡಿದ್ದಾರೆ. ಈ ಹಿಂದೆ ಹೊಳೆನರಸೀಪುರದಲ್ಲಿ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸಿದ್ದರು.

**ಗೌರವ ಪ್ರಶಸ್ತಿ ಪುರಸ್ಕೃತರು**

ಗೌರವ ಪ್ರಶಸ್ತಿಗೆ ಪ್ರೊ.ಶಿವರಾಮಯ್ಯ, ಚಂದ್ರಕಾಂತ ಪೋಕಳೆ, ಡಾ.ವಸುಂಧರಾ ಭೂಪತಿ, ಡಾ.ಎಸ್.ತುಕಾರಾಂ ಅವರು ಭಾಜನರಾಗಿದ್ದಾರೆ.

**ಸಾಹಿತ್ಯಶ್ರೀ ಪ್ರಶಸ್ತಿ ಪುರಸ್ಕೃತರು**

ಬಳ್ಳಾರಿಯ ಡಾ.ನಿಷ್ಕ ರುದ್ರಪ್ಪ, ಬಾಗಲಕೋಟೆಯ ಡಾ.ವೀರೇಶ ಬಡಿಗೇರ, ತುಮಕೂರು ಡಾ.ಸಿ.ಜಿ. ಲಕ್ಷ್ಮೀಪತಿ, ಡಾ.ಓ.ನಾಗರಾಜು, ಬೆಂಗಳೂರಿನ ಕಂನಾ ಡಿಗ ನಾರಾಯಣ, ಡಾ.ಜ್ಯೋತಿ, ಜಯರಾಮ್ ರಾಯಪುರ, ದಾವಣಗೆರೆ ಕುಮುದಾ ಸುಶೀಲ್, ಮಂಗಳೂರಿನ ಬಿ. ಎಂ.ಬಷೀರ್ ಆಯ್ಕೆಯಾಗಿದ್ದಾರೆ.

# ಹೊಸ ಎಲ್‌ಪಿಜಿ ಸಿಲಿಂಡರ್ ಸಂಪರ್ಕ ತಾತ್ಕಾಲಿಕ ಸ್ಥಗಿತ

• ಪ್ರಜೋದಯ ವರದಿ



**ಬೆಂಗಳೂರು:** ಹೊಸ ಮತ್ತು ಹೆಚ್ಚುವರಿ ಎಲ್‌ಪಿಜಿ ಸಿಲಿಂಡರ್‌ಗಳ ಸಂಪರ್ಕವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಅಖಿಲ ಭಾರತ ಎಲ್‌ಪಿಜಿ ವಿತರಕರ ಒಕ್ಕೂಟ ತಿಳಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ರಾಧಾಕೃಷ್ಣ, ಕಾರ್ಯದರ್ಶಿ ಎಲ್.ಜಿ.ಕುಮಾರ್, ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ಎಲ್‌ಪಿಜಿ ಲಭ್ಯತೆಯ ಕುರಿತು ಸಾರ್ವಜನಿಕರಲ್ಲಿ ಆತಂಕ ಮತ್ತು ಊಹಾಪೋಹಗಳು ಹೆಚ್ಚುತ್ತಿವೆ. ಗ್ರಾಹಕರು ಆತಂಕದಿಂದ ಎಲ್‌ಪಿಜಿ ಸಿಲಿಂಡರ್‌ಗಳನ್ನು ಅನವಶ್ಯಕವಾಗಿ ಬುಕ್ಕಿಂಗ್ ಮಾಡಬಾರದು ಹಾಗು ಎಲ್‌ಪಿಜಿ ಏಜೆನ್ಸಿ, ಗೋದಾಮುಗಳಿಗೆ ಭೇಟಿ ನೀಡಬಾರದು. ಸಿಲಿಂಡರ್‌ಗಳನ್ನು ಮನೆಗಳಿಗೆ ವಿತರಿಸುತ್ತೇವೆಂದು ಭರವಸೆ ನೀಡಿದರು.

ತೈಲ ಮಾರುಕಟ್ಟೆ ಕಂಪನಿಗಳ (ಒಎಂಸಿ) ನಿರ್ದೇಶನದಂತೆ ಗೃಹ ಬಳಕೆದಾರರು ಹಾಗು ವಾಣಿಜ್ಯ ಬಳಕೆದಾರರಿಗೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ನಿರಂತರವಾಗಿ ಪೂರೈಸಲಾಗುತ್ತಿದೆ. ಒಎಂಸಿಯ ನಿರ್ದೇಶನ, ಮಾರ್ಗಸೂಚಿ ಪ್ರಕಾರವೇ ವಿತರಕರು ಕಾರ್ಯನಿರ್ವಹಿಸುತ್ತಿದ್ದಾರೆ. ಎಲ್‌ಪಿಜಿ ಉತ್ಪಾದನೆ, ಹಂಚಿಕೆ ಅಥವಾ ಒಟ್ಟು ಪೂರೈಕೆಗೆ ಸಂಬಂಧಿಸಿ ಯಾವುದೇ ರೀತಿಯ ನಿಯಂತ್ರಣ ವಿತರಕರಿಗೆ ಇರುವುದಿಲ್ಲ ಎಂದು ಮಾಹಿತಿ ನೀಡಿದರು.

ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯು ಒಎಂಸಿ ಮಾಡುವ ಹಂಚಿಕೆಯನ್ನು ಅವಲಂಬಿಸಿದೆ. ಪ್ರಸ್ತುತ ಬೇಡಿಕೆಗೆ ತಕ್ಕಂತೆ ಪೂರೈಕೆ ಆಗುತ್ತಿಲ್ಲ. ಇದರ ಜೊತೆಗೆ ಸಾಫ್ಟ್‌ವೇರ್ ಹಾಗೂ ಸರ್ವರ್ ಸಮಸ್ಯೆ ಇದೆ. ಗ್ರಾಹಕರು ಯಾವುದೇ ರೀತಿಯ ವದಂತಿಗಳಿಗೆ ಕಿವಿಗೊಡಬಾರದೆಂದರು.

ಎಲ್ಲಾ ಗ್ರಾಹಕರು ಕಡ್ಡಾಯವಾಗಿ ಇಕೆವೈಸಿ ಮಾಡಿಕೊಳ್ಳಬೇಕು. ಉಜ್ವಲ ಯೋಜನೆಯ ಫಲಾನುಭವಿಗಳು ಪ್ರತಿ ಏಳು ರಿಫಿಲ್‌ಗಳ ನಂತರ ಮರು ಇಕೆವೈಸಿ ಮಾಡಿಕೊಳ್ಳಬೇಕು. ನೋಂದಾಯಿತ ಮೊಬೈಲ್ ಸಂಖ್ಯೆಯಿಂದ ಮಾತ್ರ ಬುಕ್ಕಿಂಗ್ ಮಾಡಬೇಕು. ಒಟಿಪಿಯನ್ನು ಮುಂಚಿತ ವಾಗಿ ಹಂಚಿಕೊಳ್ಳಬಾರದೆಂದು ಸಲಹೆ ನೀಡಿದರು.

ರಾಜ್ಯದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳನ್ನು ಬುಕ್ಕಿಂಗ್ ಮಾಡಿದ ನಂತರ ಸರಾಸರಿ 8ರಿಂದ 10 ದಿನಗಳ ನಂತರ ವಿತರಿಸಲಾಗುತ್ತಿದೆ. ವಾಣಿಜ್ಯ ಬಳಕೆಯ ಗ್ರಾಹಕರು ತಮ್ಮ ಹತ್ತಿರದ ಏಜೆನ್ಸಿಯಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಅನಧಿಕೃತ ಮಾರಾಟಗಾರರು ಅಥವಾ ಮಧ್ಯವರ್ತಿಗಳಿಂದ ಸಿಲಿಂಡರ್‌ಗಳನ್ನು ಖರೀದಿ ಮಾಡಬಾರದು. ಪ್ರತಿಯೊಂದು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ನ ವಿತರಣೆಗೆ ನಗದು ರಸೀದಿ ಪಡೆಯಬೇಕೆಂದು ಸಲಹೆ ನೀಡಿದರು.

# ಭೂಮಿ ವಾಪಾಸ್ ನೀಡಿ, ಇಲ್ಲವೇ ಪರಿಹಾರ ಹೆಚ್ಚಿಸಿ

## ಕೆಐಎಡಿಬಿ ವಿರುದ್ಧ ಚಿಕ್ಕಬಸವನಹಳ್ಳಿ ರೈತರ ಆಗ್ರಹ



• ಪ್ರಜೋದಯ ವರದಿ

**ಹಾಸನ:** ಕೈಗಾರಿಕೆ ಹಾಗು ವಾಣಿಜ್ಯ ಉದ್ದೇಶಗಳಿಗಾಗಿ 30 ವರ್ಷದ ಹಿಂದೆ ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಉದ್ದೇಶಿತ ಯೋಜನೆಗೆ ಬಳಸದಿರುವುದರಿಂದ ವಾಪಾಸ್ ನೀಡುವಂತೆ ಒತ್ತಾಯಿಸಿ ನಗರ ಹೊರವಲಯದ ಚಿಕ್ಕಬಸವನಹಳ್ಳಿ ರೈತರು ಬುಧವಾರ ಪ್ರತಿಭಟನೆ ನಡೆಸಿದರು.

30 ವರ್ಷಗಳಿಂದ ಕಾಮಗಾರಿ ನಡೆಸದೆ ಸುಮ್ಮನಿದ್ದ ಕೆಐಎಡಿಬಿಯವರು, ಇದೀಗ ಕಾಮಗಾರಿ ಮಾಡಲು ಬಂದಿದ್ದರಿಂದ ಆಕ್ರೋಶಗೊಂಡ ರೈತರು ವಾಹನ ತಡೆದು ಪ್ರತಿಭಟನೆ ನಡೆಸಿದರು. ಗ್ರಾಮದ ಸಾರ್ವಜನಿಕ ಉದ್ದೇಶ ಹಾಗೂ ಭೂಮಿ ಕಳೆದು ಕೊಂಡ ರೈತರಿಗೆ ನಿವೇಶನಕ್ಕಾಗಿ ಭೂಮಿ ಮೀಸಲಿಡುವಂತೆ ಒತ್ತಾಯ ಮಾಡಿದ ಪ್ರತಿಭಟನಾಕಾರರು, 30 ವರ್ಷದಿಂದ 68 ಎಕರೆ ಭೂಮಿಯಲ್ಲಿ ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇವೆ. ಈ ನಡುವೆ ದಿಢೀರ್ ಭೂಮಿ ಸ್ವಾಧೀನಕ್ಕೆ ಬಂದಿದ್ದ ಕೆಐಎಡಿಬಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಂಪೂರ್ಣ ಭೂಮಿ ಕಳೆದುಕೊಂಡ ಬಡ ರೈತರು ಈಗ ಬರಿಗೈ ಆಗಿದ್ದೇವೆ. ನಮ್ಮ ಭೂಮಿಯನ್ನು ನಮಗೆ ವಾಪಾಸ್ ಕೊಡಿ, ಇಲ್ಲವೇ ಈಗಿನ ಮಾರುಕಟ್ಟೆ ದರದ ಅನ್ವಯ ಪರಿಹಾರ ನೀಡಬೇಕು. 30 ವರ್ಷಗಳ ಹಿಂದೆ ಕೊಟ್ಟ ಪರಿಹಾರದ ದುಪ್ಪಟ್ಟು ಮೊತ್ತವನ್ನು ಈಗ ವಾಪಾಸ್ ನೀಡುತ್ತೇವೆ. ಸೂಕ್ತ ಪರಿಹಾರ ನೀಡದ ಹೊರತು ಕಾಮಗಾರಿ ಮಾಡಲು ಬಿಡುವುದಿಲ್ಲವೆಂದು ರೈತರು ಎಚ್ಚರಿಕೆ ನೀಡಿದರು. ಸಂತ್ರಸ್ತರಾದ ಶ್ರೀನಿವಾಸ್, ವಿಶ್ವನಾಥ್, ಭಾಗ್ಯಮ್ಮ, ಜಯಮ್ಮ, ಸುಶೀಲಮ್ಮ, ನಂಜೇಗೌಡ, ಮಂಜೇಗೌಡ ಇದ್ದರು.

# ಆರ್ಥಿಕ ಶಿಸ್ತು-ಜನಪರ ಕಾಳಜಿಯ ಬಜೆಟ್: ಸಿಎಂ

» ಮೊದಲನೇ ಪುಟದಿಂದ

ಮುಂಚೂಣಿಯಲ್ಲಿದೆ ಎಂದು ಸಮರ್ಥಿಸಿಕೊಂಡರು. ಇದುವರೆಗೆ 1.31 ಲಕ್ಷ ಕೋಟಿ ರೂ. ಗ್ಯಾರಂಟಿಗಳಿಗೆ ವೆಚ್ಚ ಮಾಡಲಾಗಿದೆ. ಮಹಾರಾಷ್ಟ್ರ ಸರ್ಕಾರ, ಜನಕಲ್ಯಾಣ ಯೋಜನೆಗಳಿಗೆ ವರ್ಷದಿಂದ ವರ್ಷಕ್ಕೆ ಅನುದಾನ ಕಡಿಮೆ ಮಾಡಿದೆ. ಆದರೆ ನಾವು ಗ್ಯಾರಂಟಿಗಳಿಗೆ ಪ್ರತಿ ವರ್ಷ ಒಂದೇ ರೀತಿಯಲ್ಲಿ ಅನುದಾನ ನೀಡಿದ್ದೇವೆಂದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಕೇಂದ್ರ ಸರ್ಕಾರ ಜಿಎಸ್‌ಟಿ ಹಣ ನೀಡದೆ ಇದ್ದರಿಂದ ಬೊಕ್ಕಸಕ್ಕೆ 10 ಸಾವಿರ ಕೋಟಿ ರೂ. ಹೊರೆಯಾಗಿದೆ. 2026-27ರಲ್ಲಿ 15 ಸಾವಿರ ಕೋಟಿ ರೂ. ನಷ್ಟವಾಗಲಿದೆ. ಕೇಂದ್ರದ ಮಲ ತಾಯಿ ಧೋರಣೆಯಿಂದ ರಾಜ್ಯಕ್ಕೆ ನಷ್ಟವುಂಟಾಗಿದೆ.

ಬಿಜೆಪಿಯವರ ಕಾಲಾವಧಿಯಲ್ಲಿ ಬಿಬಿಎಂಪಿಗೆ ನಾಲ್ಕು ವರ್ಷದಲ್ಲಿ 10435 ಕೋಟಿ ರೂ. ನೀಡಿದೆ. ನಮ್ಮ ಸರ್ಕಾರ ನಾಲ್ಕು ವರ್ಷದಲ್ಲಿ ಒಟ್ಟು 20200 ಕೋಟಿ ರೂ. ನೀಡಿದೆ. ಶಿಕ್ಷಣಕ್ಕೆ 65,000 ಕೋಟಿ ರೂ. ಖರ್ಚು ಮಾಡಲಾಗಿದ್ದು, 2026-27ರಲ್ಲಿ 72,386 ಕೋಟಿ ರೂ. ನಿಗದಿಪಡಿಸಲಾಗಿದೆ. ಆದ್ದರಿಂದ ನಮ್ಮ ಸರ್ಕಾರ ಗ್ಯಾರಂಟಿ ಮತ್ತು ಅಭಿವೃದ್ಧಿಗೆ ವೆಚ್ಚ ಮಾಡುತ್ತಿದ್ದು, ಬಿಜೆಪಿಯವರು ಈ ಬಗ್ಗೆ ಅಪಪ್ರಚಾರ ಮಾಡುವುದು ತಪ್ಪು ಎಂದು ಸಲಹೆ ನೀಡಿದರು.

# ಗುಣಮಟ್ಟದ ಶಿಕ್ಷಣ ಕಲಿಸಲು ಸೂಚನೆ

• ಪ್ರಜೋದಯ ವರದಿ



**ಹಾಸನ:** ಪಿ.ಎಂ.ಶ್ರೀ ಶಾಲೆಯಲ್ಲಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕಲಿಸಲು ಅಧಿಕಾರಿಗಳು ಹಾಗೂ ಶಿಕ್ಷಕರು, ಮುಖ್ಯೋಪಾಧ್ಯಾಯರು ಕ್ರಮವಹಿಸಬೇಕೆಂದು ಭಾರತ ಸರ್ಕಾರ ನಿಯೋಜಿತ ಜಂಟಿ ಕಾರ್ಯದರ್ಶಿ ರಿಚಾ ಖೋಡಾ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ಶಾಲಾ ಮಟ್ಟದಲ್ಲಿ ಪಿ.ಎಂ.ಶ್ರೀ ಯೋಜನೆಯ ಅನುಷ್ಠಾನವನ್ನು ಪರಿಶೀಲಿಸಲು ಹಾಸನ ಜಿಲ್ಲೆಯ ಪಿ.ಎಂ.ಶ್ರೀ ಶಾಲೆಗಳಿಗೆ ಭಾರತ ಸರ್ಕಾರ ನಿಯೋಜಿತ ಜಂಟಿ ಕಾರ್ಯದರ್ಶಿಗಳ ತಂಡ ಭೇಟಿಯಾದ ಹಿನ್ನಲೆಯಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ಶಾಲೆ ಕಟ್ಟಡ, ಆಟದ ಮೈದಾನ ಸೇರಿ ಇತರೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ತಿಳಿಸಿದರು.

ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ವಿದ್ಯಾಕುಮಾರಿ ಅವರು ಮಾತನಾಡಿ, ತರಗತಿಗೆ ತಕ್ಕಂತೆ ಪುಸ್ತಕಗಳನ್ನು ಶಾಲೆಗಳು ಖರೀದಿಸಿ ವಿದ್ಯಾರ್ಥಿಗಳ ಬಳಕೆಗೆ ತಿಳಿಸಿದರು.

ಈಗಾಗಲೇ ಸಾಕಷ್ಟು ಕ್ರೀಡಾ ಸಾಮಗ್ರಿಗಳು, ಲ್ಯಾಬ್‌ಗೆ ಅಗತ್ಯವಿರುವ ಉಪಕರಣಗಳು ಹಾಗೂ ಇತರೆ ಅವಶ್ಯಕ ಸಾಮಗ್ರಿಗಳು ಖರೀದಿಗೆ ಅನುದಾನಗಳನ್ನು ಪಿ.ಎಂ.ಶ್ರೀ ಶಾಲೆಗಳಿಗೆ ನೀಡಲಾಗಿದ್ದು ಬಳಕೆ ಮಾಡುವಂತೆ ಸೂಚಿಸಿದರು.

ಎಲ್ಲಾ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಶೌಚಾಲಯ, ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಅಥವಾ ಸಿಎಸ್‌ಆರ್ ನಿಧಿಯಡಿಯಲ್ಲಿ ಹೆಚ್ಚುವರಿ ಶೌಚಾಲಯ ನಿರ್ಮಾಣ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ಅತಿಥಿ ಶಿಕ್ಷಕರ ವೇತನ ಹೊರತು ಪಡಿಸಿ ಇತರೆ ಸೌಲಭ್ಯಗಳಿಗೆ ಬಿಡುಗಡೆಯಾಗಿರುವ ಹಣವನ್ನು ಸಂಪೂರ್ಣವಾಗಿ ಬಳಕೆ ಮಾಡಿ ಕೊಳ್ಳಬೇಕೆಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪೂರ್ಣಿಮಾ, ಸಮಗ್ರ ಶಿಕ್ಷಣ ಕರ್ನಾಟಕದ ಪ್ರೋಗ್ರಾಮಿಂಗ್ ಅಧಿಕಾರಿ ಶಶಿಕಲಾ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಬಾಲರಾಮ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ನರೇಗಾ: ವೈಯಕ್ತಿಕ ಯೋಜನೆ ಫಲಾನುಭವಿಗಳು ಅತಂತ್ರ

» ಮೊದಲನೇ ಪುಟದಿಂದ

ರುವುದರಿಂದ ಜನರು ತಾವು ಕೈಗೊಂಡ ಕೆಲಸವನ್ನು ಪೂರ್ಣಗೊಳಿಸಲಾಗದೆ ಅರ್ಧಕ್ಕೆ ಸ್ಥಗಿತಗೊಳಿಸುವಂತಾಗಿದೆ.

ಮಲೆನಾಡು ಭಾಗದಲ್ಲಿ ಕುಡಿಯುವ ನೀರಿಗಾಗಿ ರಿಂಗ್ ಬಾವಿಗಳ ನಿರ್ಮಾಣಕ್ಕೆ ನರೇಗಾ ಯೋಜನೆಯಡಿ 1.50 ಲ.ರೂ. ಸಹಾಯಧನ ಸಿಗುವುದರಿಂದ ನೂರಾರು ಸಂಖ್ಯೆಯಲ್ಲಿ ಜನರು ಅರ್ಜಿ ಸಲ್ಲಿಸಿ ಮಂಜೂರಾತಿ ಪಡೆದುಕೊಂಡಿದ್ದಾರೆ. ಬಾವಿ ತೆಗೆಯುವ ಗುತ್ತಿಗೆದಾರರಿಗೆ ಕೆಲಸವನ್ನು ವಹಿಸಿದ್ದಾರೆ. ಆದರೆ, ಸ್ವಲ್ಪವೂ ಅನುದಾನ ಸಿಗದೆ ರಿಂಗ್ ಮಾಡಿಸಲು ಬೇಕಾದ ಸಿಮೆಂಟ್, ಜೆಲ್ಲಿ, ಕಬ್ಬಿಣ ಖರೀದಿಗೆ ಹಣ ಇಲ್ಲದೆ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿರುವುದರಿಂದ ಮಣ್ಣು ಕುಸಿಯುತ್ತಿದೆ.

ಹಣ ನೀಡದಿರುವುದರಿಂದ ಕೆಲಸಗಾರರು ಕೂಡ ಬೇರೆಡೆಗೆ ಹೋಗಿದ್ದಾರೆ. ಆಗಾಗ್ಗೆ ಸುರಿಯುವ ಅಕಾಲಿಕ ಮಳೆಯಿಂದ ಭೂಮಿ ಕುಸಿಯುವ ಆತಂಕ ಎದುರಾಗಿದೆ.ಹೀಗಾಗಿ ಸರ್ಕಾರ ಹಣ ಬಿಡುಗಡೆ ಮಾಡಬೇಕೆಂದು ಫಲಾನುಭವಿಗಳು ಒತ್ತಾಯಿಸಿದ್ದಾರೆ.

# ಹಾನುಬಾಳು ಗ್ರಾ.ಪಂ.ಗೆ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನ

» ಮೊದಲನೇ ಪುಟದಿಂದ

**ಆಯ್ಕೆ ಆಗಿರುವ ಮಾನದಂಡ**

ಗಾಂಧಿ ಗ್ರಾಮ ಪ್ರಶಸ್ತಿಯು ಪಂಚಾಯಿತಿಯ ದಕ್ಷತೆಯ ಅಳತೆ ಗೋಲಾಗಿದೆ. 100ಕ್ಕೂ ಹೆಚ್ಚು ಅಂಶಗಳನ್ನು ಆಧರಿಸಿ ಪಂಚತಂತ್ರ ತಂತ್ರಾಂಶದ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ. ತೆರಿಗೆ ವಸೂಲಿ, ನೈರ್ಮಲ್ಯ ಮತ್ತು ಘನತ್ಯಾಜ್ಯ ನಿರ್ವಹಣೆ, ಗ್ರಾಮ ಪಂಚಾಯಿತಿಗಳಲ್ಲಿ ಪಾರದರ್ಶಕ ಆಡಳಿತವನ್ನು ಉತ್ತೇಜಿಸುವುದು ಮತ್ತು ಗ್ರಾಮಸ್ಥರಿಗೆ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ತಲುಪಿಸುವುದು ಪ್ರಶಸ್ತಿಯ ಉದ್ದೇಶವಾಗಿದೆ. ಪ್ರತಿ ವರ್ಷ ಗಾಂಧಿ ಜಯಂತಿಯ ಸಂದರ್ಭದಲ್ಲಿ ರಾಜ್ಯ ಸರ್ಕಾರವು ರಾಜ್ಯದ ಆಯ್ದ ಅತ್ಯುತ್ತಮ ಪಂಚಾಯಿತಿಗಳಿಗೆ ಈ ಗೌರವವನ್ನು ಪ್ರದಾನ ಮಾಡುತ್ತದೆ. ಈ ಪಂಚಾಯಿತಿ 7 ಬಾರಿ ಪ್ರಶಸ್ತಿ ಪಡೆದಿರುವುದು ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ.

# ಅಪರಿಚಿತ ವಾಹನ ಡಿಕ್ಕಿ: ವ್ಯಕ್ತಿ ಸಾವು

• ಪ್ರಜೋದಯ ವರದಿ

**ಹಾಸನ:** ಅಪರಿಚಿತ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಶಾಂತಿಗ್ರಾಮ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಹೊಳೆನರಸೀಪುರ ತಾಲ್ಲೂಕು ಹಳೇಕೋಟೆ ಹೋಬಳಿ ಮಾವನೂರು ಗ್ರಾಮದ ಅಶೋಕ್ (47) ಮೃತರು. ಕೆಲಸದ ನಿಮಿತ್ತ ಶಾಂತಿಗ್ರಾಮಕ್ಕೆ ಹೋಗುವುದಾಗಿ ಹೇಳಿದ್ದ ಅವರು ವಾಪಾಸ್ ಬರುವಾಗ ಅಪಘಾತ ಸಂಭವಿಸಿದೆ. ಅಪರಿಚಿತ ವಾಹನ ಡಿಕ್ಕಿಯಾಗಿ ಗಂಭೀರ ಗಾಯಗೊಂಡಿದ್ದ ಅಶೋಕ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ದೇವಾಲಯ ಬಾಗಿಲು ಮುರಿದು ಆಭರಣ ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ದೇವಸ್ಥಾನದ ಬೀಗ ಮುರಿದು ಒಳ ಪ್ರವೇಶಿಸಿರುವ ಕಳ್ಳರು 30 ಸಾವಿರ ರೂ. ಮೌಲ್ಯದ ಬೆಳ್ಳಿ ಆಭರಣ ಕದ್ದಿರುವ ಘಟನೆ ತಾಲ್ಲೂಕಿನ ಚಿಕ್ಕಹಲ್ಲೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಬಿಳಿಕಲ್ಲು ಶ್ರೀ ಲಕ್ಷ್ಮಿ ರಂಗನಾಥಸ್ವಾಮಿ ದೇವಾಲಯ ಹೊರ ಭಾಗದಲ್ಲಿರುವ ಶ್ರೀ ಗರುಡ ಕೆಂಚರಾಯಸ್ವಾಮಿ ಗುಡಿಯ ಬೀಗ ಮುರಿದಿರುವ ಕಳ್ಳರು ದೇವರ ಬೆಳ್ಳಿ ಪ್ರಭಾಳೆ, ಛತ್ರಿ, ನಾಗಾಭರಣ, ದೇವರ ಬೆಳ್ಳಿಯ ಕಣ್ಣುಗಳನ್ನು ಕಳ್ಳತನ ಮಾಡಿದ್ದಾರೆ. ಒಟ್ಟು 30 ಸಾವಿರ ರೂ. ಮೌಲ್ಯದ ಆಭರಣ ಕಳುವಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಉಕ್ರೇನ್‌ನ 389 ಡ್ರೋನ್ ಹೊಡೆದು ಉರುಳಿಸಿದ ರಷ್ಯಾ

**ಮಾಸ್ಕೊ:** ಉಕ್ರೇನ್‌ನ 389 ಡ್ರೋನ್‌ಗಳನ್ನು ಹೊಡೆದು ಉರುಳಿಸಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಬುಧವಾರ ತಿಳಿಸಿದೆ.ಈ ದಾಳಿಯು ಉಕ್ರೇನ್ ದೇಶೀಯವಾಗಿ ಅಭಿವೃದ್ಧಿಪಡಿಸಿದ ಮತ್ತು ತಯಾರಿಸಿದ ಡ್ರೋನ್‌ಗಳ ಸಾಮರ್ಥ್ಯವನ್ನು ಪ್ರದರ್ಶಿಸಿದೆ.

ಉಕ್ರೇನ್‌ನ ನಾಗರಿಕ ಪ್ರದೇಶಗಳ ಮೇಲೆ ರಷ್ಯಾವು 948 ಡ್ರೋನ್‌ಗಳು ಹಾಗೂ 34 ಕ್ಷಿಪಣಿಗಳನ್ನು ಹಾರಿಸಿದ ಒಂದು ದಿನದ ಬಳಿಕ, ಉಕ್ರೇನ್ ಪ್ರತಿದಾಳಿ ನಡೆಸಿದೆ. ರಷ್ಯಾ ನಡೆಸಿದ ದಾಳಿಯಲ್ಲಿ ಕನಿಷ್ಠ ಆರು ಜನರು ಮೃತಪಟ್ಟಿದ್ದು, 50 ಜನರು ಗಾಯಗೊಂಡಿದ್ದಾರೆಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

# ಇಂದು ಮತದಾನ ಕಸಿದುಕೊಂಡವರು ನಾಳೆ ಪೌರತ್ವ ಕಿತ್ತುಕೊಳ್ಳುತ್ತಾರೆ

• ಪ್ರಜೋದಯ ವರದಿ



**ಮೇನಗುರಿ(ಪಶ್ಚಿಮ ಬಂಗಾಳ):** ಎಸ್‌ಐಆರ್ ಮೂಲಕ ಮತದಾರರ ಹಕ್ಕನ್ನು ಕಸಿದು ಕೊಂಡಿರುವ ಕೇಂದ್ರ ಸರ್ಕಾರವು, ಮುಂದೆ ಎನ್‌ಆರ್‌ಐ ಮೂಲಕ ಪೌರತ್ವವನ್ನು ಕೂಡ ಕಿತ್ತುಕೊಳ್ಳುತ್ತದೆಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆರೋಪಿಸಿದ್ದಾರೆ.

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಹಿನ್ನಲೆಯಲ್ಲಿ ಮಮತಾ ಬ್ಯಾನರ್ಜಿ ಅವರು ಬುಧವಾರ (ಮಾ.25) ಉತ್ತರ ಬಂಗಾಳದ ಮೇನಗುರಿ ಕ್ಷೇತ್ರದಿಂದ ಚುನಾವಣಾ ಪ್ರಚಾರ ಆರಂಭಿಸಿದ್ದಾರೆ. 2019ರ ಲೋಕಸಭಾ ಚುನಾವಣೆ ಬಳಿಕ ಈ ಭಾಗವು ಬಿಜೆಪಿಯ ಭದ್ರಕೋಟೆಯಾಗಿದೆ. ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗವು ಎಸ್‌ಐಆರ್ ಮೂಲಕ ಜನರ ಮತದಾನದ ಹಕ್ಕನ್ನು ಕಿತ್ತುಕೊಳ್ಳುವ ಮೂಲಕ ಪ್ರಜಾಪ್ರಭುತ್ವವನ್ನು ನಾಶ ಮಾಡುತ್ತಿವೆಂದು ಹೇಳಿದ್ದಾರೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಅನುಸರಿಸುತ್ತಿಲ್ಲ. ಎಸ್‌ಐಆರ್‌ನಿಂದ ಮಹಿಳೆಯರು ಸೇರಿ ಹಲವು ಸಮುದಾಯಗಳಿಗೆ ಅನ್ಯಾಯವಾಗುತ್ತಿದೆ. ಅದು ಆರಂಭವಾದ ನಂತರ ಬಂಗಾಳದಲ್ಲೇ 220 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ.

ಈ ವೇಳೆ ತೈಲ ಬೆಲೆ ಏರಿಕೆ ಮತ್ತು ಎಲ್‌ಪಿಜಿ ಸಿಲಿಂಡರ್ ಕೊರತೆಯ ಕುರಿತು ಮಮತಾ ಬ್ಯಾನರ್ಜಿ ಕಿಡಿಕಾರಿದ್ದಾರೆ. ಪಶ್ಚಿಮ ಬಂಗಾಳದ 294 ವಿಧಾನಸಭಾ ಕ್ಷೇತ್ರಗಳಿಗೆ ಏ.23 ಮತ್ತು ಏ.29ರಂದು ಎರಡು ಹಂತದಲ್ಲಿ ಮತದಾನ ನಡೆಯಲಿದೆ. ಮೇ.4ಕ್ಕೆ ಫಲಿತಾಂಶ ಘೋಷಣೆಯಾಗಲಿದೆ.

# ಪಿಎನ್‌ಜಿ ಇರುವ ಕಡೆಗಳಲ್ಲಿ ಅದನ್ನು ಪಡೆದುಕೊಳ್ಳದಿದ್ದರೆ ಎಲ್‌ಪಿಜಿ ಬಂದ್

• ಪ್ರಜೋದಯ ವರದಿ

**ನವದೆಹಲಿ:** ಕೊಳವೆ ಮೂಲಕ ನೈಸರ್ಗಿಕ ಅನಿಲ (ಪಿಎನ್‌ಜಿ) ಪೂರೈಸುವ ಸೌಲಭ್ಯ ಇರುವ ಕಡೆಗಳಲ್ಲಿ ಅದನ್ನು ಪಡೆದುಕೊಳ್ಳದೆ ಇರುವವರಿಗೆ ಎಲ್‌ಪಿಜಿ ಪೂರೈಕೆಯನ್ನು ಸ್ಥಗಿತಗೊಳಿಸಲಾಗುತ್ತದೆಂದು ಕೇಂದ್ರ ಸರ್ಕಾರ ಬುಧವಾರ ಹೇಳಿದೆ.

ಎಲ್‌ಪಿಜಿ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಹೊಸ ಆದೇಶವನ್ನು ಹೊರಡಿಸಲಾಗಿದೆ. ಕೊಳವೆ ಮೂಲಕ ನೈಸರ್ಗಿಕ ಅನಿಲ ಜಾಲವನ್ನು ಉತ್ತೇಜಿಸುವ ಇರಾದೆಯನ್ನು ಹೊಂದಿದೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಇಂಧನ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಪ್ರಮುಖವಾಗಿಯೂ ಎಲ್‌ಪಿಜಿ ಕೊರತೆ ಕಂಡುಬಂದಿದೆ. ದೇಶದಲ್ಲಿ ಕೋವಿಡ್ ನಂತಹ ಪರಿಸ್ಥಿತಿ ಎದುರಾಗ ಬಹುದು. ಎಲ್ಲಾ ಪರಿಸ್ಥಿತಿ ಎದುರಿಸಲು ಸಿದ್ಧರಾಗಬೇಕೆಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದರು.

ಏತನ್ಮಧ್ಯೆ ಗೃಹ ಬಳಕೆಯ ಸಿಲಿಂಡರ್ ಮರುಪೂರಣ(ರಿಫಿಲಿಂಗ್) ಅವಧಿಯನ್ನು 25ರಿಂದ 35 ದಿನಗಳ ವರೆಗೆ ಹೆಚ್ಚಿಸಲಾಗಿದೆ ಎಂಬ ವರದಿಗಳನ್ನು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ತಳ್ಳಿ ಹಾಕಿದೆ. ಅಲ್ಲದಿರುವ ಚಾಲ್ತಿಯಲ್ಲಿರುವ ನಿಯಮಗಳಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ ಎಂದು ಸ್ಪಷ್ಟಪಡಿಸಿದೆ.



# ಅರಸೀಕಟ್ಟೆಯಲ್ಲಿ ಗಣಿಗಾರಿಕೆ ನಿಷೇಧಕ್ಕೆ ಆಗ್ರಹ

• ಪ್ರಜೋದಯ ವರದಿ




**ಹಾಸನ:** ಅರಕಲಗೂಡು ತಾಲ್ಲೂಕು ಅರಸೀಕಟ್ಟೆ ಗ್ರಾಮದಲ್ಲಿ ನಡೆಯುತ್ತಿರುವ ಗಣಿಗಾರಿಕೆಯಿಂದ ಭಾರೀ ತೊಂದರೆಯಾಗುತ್ತಿದ್ದು, ಜಿಲ್ಲಾಡಳಿತ ಮಧ್ಯ ಪ್ರವೇಶಿಸಿ ಗಣಿಗಾರಿಕೆ ನಿಷೇಧಿಸಬೇಕೆಂದು ಅರಕಲಗೂಡು ಕಾವಲು ಸಮಿತಿ ಅಧ್ಯಕ್ಷ ವಿಜಯಕುಮಾರ ಅವರು ಆಗ್ರಹಿಸಿದರು.

ಗ್ರಾಮದ ಸರ್ವೆ ನಂ.116ರಲ್ಲಿ ಗಣಿಗಾರಿಕೆ ನಡೆಯುತ್ತಿದ್ದು, ಅದರಿಂದ ಸ್ಥಳೀಯರಿಗೆ ವಿಪರೀತ ತೊಂದರೆಯಾಗುತ್ತಿದೆ. ನೆಹರೂ ನಗರದ ನಿವಾಸಿಗಳು ಗಣಿಗಾರಿಕೆಯಿಂದ ಹೊರ ಬರುವ ಧೂಳಿನಿಂದ ಉಸಿರಾಟಕ್ಕೆ ಸಮಸ್ಯೆಯಾಗುತ್ತಿದೆ. ಶಾಲಾ ಕೊಠಡಿಗಳು ಬಿರುಕು ಬಿಟ್ಟಿರುವುದರಿಂದ ಕಳೆದ 2 ತಿಂಗಳಿಂದ ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ಅಂಗನವಾಡಿಯ 8 ಹಾಗು ಪ್ರಾಥಮಿಕ ಶಾಲೆಯ 16 ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಿದ್ದಾರೆಂದರು.

ಗಣಿಗಾರಿಕೆ ನಡೆಯುತ್ತಿರುವ ಜಾಗ ಅರಣ್ಯ ಇಲಾಖೆಗೆ ಸೇರಿದೆ. ಆದರೂ ಗಣಿ ಮತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಗಣಿಗಾರಿಕೆ ನಡೆಸಲು ಅನುಮತಿ ನೀಡಿದ್ದಾರೆ. ಈ ಸಂಬಂಧ ಪ್ರಕರಣ ನ್ಯಾಯಾಲಯದಲ್ಲಿದ್ದರೂ ಕ್ರಷರ್ ನಿಲ್ಲಿಸಿಲ್ಲ. ಅರಣ್ಯ ಮತ್ತು ಕಂದಾಯ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯವೇ ಸಮಸ್ಯೆಗೆ ಮೂಲ ಕಾರಣವೆಂದು ಆರೋಪಿಸಿದರು.

ಶಾಸಕ ಎ.ಮಂಜು, ತಹಶೀಲ್ದಾರ್ ಸಿ.ಸೌಮ್ಯ ಅವರ ನೇತೃತ್ವದಲ್ಲಿ 2 ಸಭೆ ನಡೆದರೂ ಪ್ರಯೋಜನವಾಗಿಲ್ಲ. ಗಣಿ ಧೂಳಿನಿಂದ ಗ್ರಾಮದಲ್ಲಿ ವಾಸಿಸಲು ಸಾಧ್ಯವಾಗುತ್ತಿಲ್ಲ. ಕೃಷಿ ಚಟುವಟಿಕೆಗೂ ಭಾರೀ ಹಿನ್ನಡೆಯಾಗಿದೆ. ಸಾರ್ವಜನಿಕರು ಊರು ತೊರೆಯುವ ಪರಿಸ್ಥಿತಿ ಸೃಷ್ಟಿಯಾಗಿದೆಯೆಂದರು.

ನೆಹರೂ ನಗರ ಜನರ ಸಮಸ್ಯೆ ಅರಿತು ಅರಕಲಗೂಡು ಕಾವಲು ಸಮಿತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಶಾಲಾ ವಿದ್ಯಾರ್ಥಿಗಳೊಂದಿಗೆ ಪ್ರತಿಭಟನೆ ನಡೆಸಿದ ಪರಿಣಾಮ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಮಂಗಳವಾರ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ವಿಶೇಷ ತಂಡ ರಚಿಸಿ ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಆದಷ್ಟು ಬೇಗ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. ಗಣಿಗಾರಿಕೆಗೆ ಸಂಪೂರ್ಣ ಕಡಿವಾಣ ಹಾಕಬೇಕೆಂದು ಆಗ್ರಹಿಸಿದರು.

ಅರಕಲಗೂಡು ಕಾವಲು ಸಮಿತಿ ಪ್ರಸನ್ನ, ಯಶ್ವಂತ್, ರವಿ, ದೇವರಾಜು, ರಮೇಶ್ ಹಾಜರಿದ್ದರು.

## ವಿವೇಕಾನಂದ ಬಿಇಡಿ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘ, ಸಮಿತಿ ಚಟುವಟಿಕೆಗೆ ಚಾಲನೆ

# ವ್ಯಕ್ತಿತ್ವ ವಿಕಸನಕ್ಕೆ ಶಿಕ್ಷಣ ಭದ್ರ ಬುನಾದಿ: ಯಳನಾಡು ಶ್ರೀ

• ಪ್ರಜೋದಯ ವರದಿ




**ಅರಸೀಕೆರೆ:** ವ್ಯಕ್ತಿತ್ವ ವಿಕಸನಕ್ಕೆ ಶಿಕ್ಷಣವೇ ಭದ್ರ ಬುನಾದಿಯಾಗಿದ್ದು ವಿದ್ಯಾರ್ಥಿ ಜೀವನ ವ್ಯರ್ಥವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಯಳನಾಡು ಮಹಾ ಸಂಸ್ಥಾನದ ಶ್ರೀ ಜ್ಞಾನಪ್ರಭು ಸಿದ್ದರಾಮದೇಶಿ ಕೇಂದ್ರ ಸ್ವಾಮೀಜಿ ಅವರು ಹೇಳಿದರು.

ನಗರದ ವಿವೇಕಾನಂದ ಬಿಇಡಿ ಕಾಲೇಜಿನಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಸಂಘ, ಸಮಿತಿ ಚಟುವಟಿಕೆಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಮನುಷ್ಯ ಸಂಘ ಜೀವಿಯಾಗಿದ್ದು ಉತ್ತಮ ಸಂಸ್ಕೃತಿ, ಸಂಸ್ಕಾರ ಪಡೆಯಲು ಶಿಕ್ಷಣ ಪಡೆಯುವುದು ಅಗತ್ಯ. ಕಲಿತ ವಿದ್ಯೆಯ ಬಲದಿಂದ ಆದರ್ಶ ಜೀವನ ನಡೆಸಿದರೆ ಮಾತ್ರವೇ ಬದುಕು ಸಾರ್ಥಕವಾಗುತ್ತದೆಂದರು.

ವಿವೇಕಾನಂದ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ನೂರಾರು ವಿದ್ಯಾರ್ಥಿಗಳು ಉನ್ನತ ಹುದ್ದೆ ಅಲಂಕರಿಸಿ ಸೇವೆಯಲ್ಲಿ ತೊಡಗಿಸಿಕೊಂಡಿರುವುದು ಹೆಮ್ಮೆಯ ವಿಷಯವಾಗಿದೆ. ಈ ನಿಟ್ಟಿನಲ್ಲಿ ಹೊಸದಾಗಿ ದಾಖಲಾಗಿರುವ ಪ್ರಶಿಕ್ಷಣಾರ್ಥಿಗಳು ಕಾಲೇಜಿನಲ್ಲಿ ದೊರೆಯುವ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಂಡು ಶೈಕ್ಷಣಿಕ ಪ್ರಗತಿ ಸಾಧಿಸಿ ಎಂದು ಕಿವಿಮಾತು ಹೇಳಿದರು.

ಕಲ್ಮುರುಡೇಶ್ವರ ತಪೋವನದ ಕರಡಿಗವಿ ಮಹಾಸಂಸ್ಥಾನದ ಶ್ರೀ ಶಿವಶಂಕರ ಶಿವಯೋಗಿ ಸ್ವಾಮೀಜಿ ಮಾತನಾಡಿ, ಕಾಲೇಜಿನಲ್ಲಿ ಕನ್ನಡ, ವಿಜ್ಞಾನ, ಗ್ರಂಥಾಲಯ, ಕ್ರೀಡೆ, ನ್ಯಾಕ್, ಶಿಸ್ತು ಪಾಲನೆ ಸೇರಿ ಹಲವು ಬಗೆಯ ಸಂಘ, ಸಮಿತಿ ರಚಿಸಿರುವುದು ಶ್ಲಾಘನೀಯ. ಆಧುನಿಕ ಹಾಗು ಸ್ಪರ್ಧಾತ್ಮಕ ಜಗತ್ತಿಗೆ ತೆರೆದುಕೊಳ್ಳುವ ಅನಿವಾರ್ಯತೆ ಸೃಷ್ಟಿಯಾಗಿದೆ. ಶಿಕ್ಷಣದ ಸಹಾಯದಿಂದ ಪರಿಪಕ್ವ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯವಿದೆ ಎಂಬುದನ್ನು ಎಲ್ಲರೂ ಮನಗಾಣಬೇಕೆಂದು ಹೇಳಿದರು.


ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಬಿ.ಕುಡವಕ್ಕಲಗಿ ಅವರು ಮಾತನಾಡಿ, ಪ್ರಶಿಕ್ಷಣಾರ್ಥಿಗಳು ವಿಷಯಾಧಾರಿತ ಕಲಿಕೆ ಜೊತೆಗೆ ಸಂಘ, ಸಮಿತಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸರ್ವಾಂಗೀಣ ಪ್ರಗತಿ ಸಾಧಿಸಬೇಕೆಂದು ತಿಳಿಸಿದರು.

ಪ್ರಾಧ್ಯಾಪಕ ಪ್ರೊ.ಕೆಂಪರಾಜ್ ಅವರು ಮಾತನಾಡಿ, ವಿದ್ಯೆ ವಿನಯ ತಂದುಕೊಡಬೇಕು. ಸಾರ್ಥಕ ಬದುಕಿಗೆ ಶಿಕ್ಷಣ ಸಾಧನವಾಗಿದೆ. ಸಾಗರದಿಂದ ನೀರನ್ನು ಹೇಗೆ ಖಾಲಿ ಮಾಡಲು ಸಾಧ್ಯವಿಲ್ಲವೋ ಹಾಗೆಯೇ ಕಲಿಕೆಗೂ ಕೊನೆಯಿಲ್ಲ ಎಂದರು.

ವ್ಯಕ್ತಿತ್ವ ವಿಕಸನ ವೇದಿಕೆ ಸಂಚಾಲಕಿ ಡಾ.ಮಾಲಿನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಾಯಕ ಪ್ರಾಧ್ಯಾಪಕರಾದ ಡಾ.ವಿಜಯ ಎಸ್.ಅಗಡಿ, ಡಾ.ಬಸವರಾಜು, ಶೇಖರ್, ಗ್ರಂಥಪಾಲಕ ವಿಜಯಕುಮಾರ್, ಕಚೇರಿ ಮುಖ್ಯಸ್ಥ ಬಿ.ಆರ್.ಶಶಿಧರ್, ರೇಖಾ, ಬಸಣ್ಣ ಇತರರಿದ್ದರು.

# ತನ್ನೊಂದಿಗೆ ತಾನೇ ಸಂಧಾನ ಮಾತುಕತೆ ನಡೆಸುತ್ತಿರುವ ಅಮೇರಿಕಾ

• ಪ್ರಜೋದಯ ವರದಿ



**ಟೆಹರಾನ್:** ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಇತ್ಯರ್ಥಗೊಳಿಸಲು ಸಂಧಾನ ಮಾತುಕತೆ ನಡೆಸಲಾಗುತ್ತಿದೆಂಬ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಯನ್ನು ಇರಾನ್ ವ್ಯಂಗ್ಯವಾಡಿದೆ.

ಅಮೇರಿಕ ತನ್ನೊಂದಿಗೆ ತಾನೇ ಮಾತುಕತೆ ನಡೆಸುತ್ತಿದೆ ಎಂದು ಇರಾನ್ ಮಿಲಿಟರಿಯ ವಕ್ತಾರ ಹೇಳಿಕೆ ನೀಡಿದ್ದಾರೆ. ಪಶ್ಚಿಮ ಏಷ್ಯಾದಲ್ಲಿ ಯುದ್ಧವನ್ನು ಕೊನೆಗೊಳಿಸಲು ಇರಾನ್ ಒಪ್ಪಂದ ಮಾಡಿಕೊಳ್ಳಲು ಬಯಸುತ್ತಿದೆಂದು ಟ್ರಂಪ್ ಮಂಗಳವಾರ ಹೇಳಿಕೊಂಡಿದ್ದರು. ಅಲ್ಲದೆ ಯುದ್ಧವನ್ನು ಕೊನೆಗೊಳಿಸಲು 15 ಅಂಶಗಳ ಯೋಜನೆಯನ್ನು ರಚಿಸಿ ಇರಾನ್‌ಗೆ ಕಳುಹಿಸಿರುವುದಾಗಿ ಹೇಳಿದೆ.

ನಿಮ್ಮ ಆಂತರಿಕ ಸಂಘರ್ಷವು ನಿಮ್ಮೊಂದಿಗೆ ನೀವೇ ಮಾತುಕತೆ ನಡೆಸುವ ಹಂತಕ್ಕೆ ತಲುಪಿದೆಯೇ ಎಂದು ಇರಾನ್ ಸಶಸ್ತ್ರ ಪಡೆಯ ವಕ್ತಾರ ಇಬ್ರಾಹಿಂ ಝೋಲ್ಫಾಕರಿ ಹೇಳಿಕೆ ನೀಡಿದ್ದಾರೆ.

ನಮ್ಮಂತಹ ಜನರು ನಿಮ್ಮೊಂದಿಗೆ ಎಂದಿಗೂ ಹೊಂದಿಕೆಯಾಗಲು ಸಾಧ್ಯವಿಲ್ಲ, ನಾವಿದನ್ನು ಹೇಳುತ್ತಲೇ ಬಂದಿದ್ದೇವೆ. ನಮ್ಮಂತಹವರಿಗೆ ನಿಮ್ಮೊಂದಿಗೆ ಒಪ್ಪಂದ ಮಾಡಿಕೊಳ್ಳಲು ಆಗುವುದಿಲ್ಲ. ಎಂದಿಗೂ ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

**15 ಅಂಶಗಳ ಪ್ರಸ್ತಾವನೆ ಮುಂದಿಟ್ಟ ಅಮೇರಿಕಾ**

ಏತನ್ಮಧ್ಯೆ ಪಶ್ಚಿಮ ಏಷ್ಯಾದಲ್ಲಿರುವ ಸಂಘರ್ಷವನ್ನು ಇತ್ಯರ್ಥಗೊಳಿಸಲು ಇರಾನ್‌ಗೆ 15 ಅಂಶಗಳ ಪ್ರಸ್ತಾವನೆಯನ್ನು ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಂದಿಟ್ಟಿದ್ದಾರೆ.

# ಮಾ.27ಕ್ಕೆ ಪೊಲೀಸರಿದ್ದಾರೆ ಎಚ್ಚರಿಕೆ ನಾಟಕ ಪ್ರದರ್ಶನ

• ಪ್ರಜೋದಯ ವರದಿ

**ಹಾಸನ:** ವಿಶ್ವಪಥ ಚಾರಿಟಬಲ್ ಟ್ರಸ್ಟ್ ವತಿಯಿಂದ ಮಾ.27ರ ಶುಕ್ರವಾರ ಸಂಜೆ 7 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಪೊಲೀಸರಿದ್ದಾರೆ ಎಚ್ಚರಿಕೆ ಎಂಬ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಕಲಾವಿದ ಯದೀಶ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ನಾಟಕ ಏರ್ಪಡಿಸಲಾಗಿದೆ. ಹಾಸನದಲ್ಲಿ 5ನೇ ಪ್ರದರ್ಶನ ಇದಾಗಿದೆ. ಪಿ.ಲಂಕೇಶ್ ಅವರು ರಚಿಸಿರುವ ಲೇಖಕ ಸಂಸ ಅವರ ನಿಜ ಜೀವನದ ದುರಂತ ಅಂತ್ಯವನ್ನು ಆಧರಿಸಿರುವ ವಿಶೇಷ ಪ್ರಯೋಗಾತ್ಮಕ ನಾಟಕ ಪ್ರೇಕ್ಷಕರ ಮನ ಗೆದ್ದಿದೆ. ಬೆಂಗಳೂರು, ಶಿವಮೊಗ್ಗಾ ಸೇರಿ ಅನೇಕ ಜಿಲ್ಲೆಗಳಲ್ಲಿ ಅಭಿನಯಿಸಲಾಗಿದೆ. ಪ್ರವೇಶ ಉಚಿತವಾಗಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರಿದರು.

ನಾಟಕ ನಿರ್ದೇಶಕ ಪ್ರದೀಪ್, ಕಲಾವಿದ ಅಣ್ಣಾಜಿಗೌಡ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK